# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **1810** |
| ಮಾನ್ಯ ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ(ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | **23.03.2026** |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಒಟ್ಟು ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರವನ್ನು ಒದಗಿಸುವುದು); | ರಾಜ್ಯದಲ್ಲಿ ಒಟ್ಟು 2160 ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ವಿವರ **ಅನುಬಂಧ-01** ರಲ್ಲಿ ನೀಡಲಾಗಿದೆ<br>ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ ರಾಜ್ಯದಲ್ಲಿ ಪ್ರಸ್ತುತ 365 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ವಿವರವನ್ನು **ಅನುಬಂಧ -2** ರಲ್ಲಿ ನೀಡಲಾಗಿದೆ |
| ಆ | ಈ ಇಲಾಖೆಯ ನಿಯಮಾವಳಿ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಅಗತ್ಯವಿರುವ ಜನಸಂಖ್ಯೆ ಮಾನದಂಡ ಎಷ್ಟು; | ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಮಾನದಂಡಗಳ ವಿವರ ಈ ಕೆಳಕಂಡಂತಿದೆ:<br>• IPHS ಮಾರ್ಗಸೂಚಿ 2022ರನ್ವಯ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಜನಸಂಖ್ಯೆ ಆಧಾರದ ಮೇಲೆ ಸ್ಥಾಪಿಸಲಾಗುತ್ತಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಸಮತಟ್ಟು ಪ್ರದೇಶದಲ್ಲಿ 30,000 ಜನಸಂಖ್ಯೆಗೆ ಹಾಗೂ ಗುಡ್ಡಗಾಡು, ಗಿರಿಜನ ಪ್ರದೇಶದಲ್ಲಿ 20,000 ಜನಸಂಖ್ಯೆಗೆ ಅನುಗುಣವಾಗಿ ಸ್ಥಾಪಿಸಲಾಗುತ್ತಿದೆ.<br>• ಮುಂದುವರೆದು, ರಾಜ್ಯದಲ್ಲಿ ಪ್ರಾಥಮಿಕ /ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ಹೊರಡಿಸಲಾದ ಆದೇಶ ಸಂಖ್ಯೆ: HFW/381/CGM/2025, Dated: 03.10.2025 ರಲ್ಲಿ "No PHC or higher-level health facility (PHC/CHC/TH/DH) shall exist within 10-15 kms or 30 minutes travel time form the location of the proposed PHC" ಎಂದು ಸೂಚಿಸಲಾಗಿದೆ.<br>ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 50,000 ಜನಸಂಖ್ಯೆಗೆ ಒಂದರಂತೆ ಸ್ಥಾಪಿಸಲಾಗುವುದು. |
| ಇ | 2023-24 ರಿಂದ 2025-26 ನೇ ಸಾಲಿನವರೆಗೆ ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರ (CHC) ಅಥವಾ | • 2023-24 ರಿಂದ 2025-26 ರವರೆಗೆ ಒಟ್ಟು **37** ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿದೆ ವಿವರ |

| | | |
|---|---|---|
| | ಮೇಲ್ದರ್ಜೆಗೆ ಏರಿಸಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು); | **ಅನುಬಂಧ-3** ರಲ್ಲಿ ನೀಡಲಾಗಿದೆ<br>• 2023-24 ರಿಂದ 2025-26 ನೇ ಸಾಲಿನವರೆಗೆ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿ (NUHM) ಯಾವುದೇ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಿರುವುದಿಲ್ಲ. |
| **ಈ** | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಲಭ್ಯವಿದೆಯೇ; ಇದ್ದಲ್ಲಿ, ಪ್ರತಿಯೊಂದು ಜಿಲ್ಲೆಯ ಒಟ್ಟು ಜನಸಂಖ್ಯೆ ಅಗತ್ಯವಿರುವ PHC ಗಳ ಸಂಖ್ಯೆ ಒದಗಿಸುವುದು; | ಆದೇಶ ಸಂಖ್ಯೆ:ಆಕುಕ 381 ಸಿಜಿಎಂ 2025, ದಿ:03.10.2025 ರಂತೆ ಹಾಗೂ IPHS ಮಾರ್ಗಸೂಚಿಗಳನ್ವಯ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.<br>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಗರ ಜನಸಂಖ್ಯೆಗೆ ಅನುಗುಣವಾಗಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು "ನಮ್ಮ ಕ್ಲಿನಿಕ್" ಗಳು ಲಭ್ಯವಿರುತ್ತದೆ. ಪ್ರತಿಯೊಂದು ಜಿಲ್ಲೆಯ ಒಟ್ಟು ನಗರ ಜನಸಂಖ್ಯೆಗೆ, ಲಭ್ಯವಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು "ನಮ್ಮ ಕ್ಲಿನಿಕ್" ಗಳ ವಿವರವನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ. |
| **ಉ** | ಕಳೆದ 3 ವರ್ಷಗಳಲ್ಲಿ ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮುಚ್ಚಲು ಅಥವಾ ವಿಲೀನಗೊಳಿಸಲು ಆರೋಗ್ಯ ಇಲಾಖೆಯಿಂದ ನಿರ್ದೇಶನ ನೀಡಲಾಗಿದೆಯೇ; ನೀಡಿದ್ದಲ್ಲಿ, ಅದರ ಕಾರಣ ಹಾಗೂ ಜಿಲ್ಲಾವಾರು ವಿವರ ಒದಗಿಸುವುದು? | ಆದೇಶ ಸಂಖ್ಯೆ:ಆಕುಕ 381 ಸಿಜಿಎಂ 2025, ದಿ:03.10.2025ರ ಆದೇಶದಂತೆ ಹೆಚ್ಚುವರಿಯಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತರ್ಕಬದ್ಧಗೊಳಿಸಲು ಕ್ರಮವಹಿಸಲಾಗುತ್ತಿದೆ.<br>ಕಳೆದ 3 ವರ್ಷಗಳಲ್ಲಿ ರಾಜ್ಯದ ಯಾವುದೇ ಜಿಲ್ಲೆಯಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮುಚ್ಚಲು ಪ್ರಸ್ತಾವನೆಗಳು ಆರೋಗ್ಯ ಇಲಾಖೆಯ ಮುಂದೆ ಇರುವುದಿಲ್ಲ. |

**ಆಕುಕ 66 ಎಸ್‌ಎಂಎಂ 2026**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**

ಅನುಬಂಧ-1

| ರಾಜ್ಯದಲ್ಲಿರುವ ಆರೋಗ್ಯ ಸಂಸ್ಥೆಗಳ ವಿವರ | | |
|---|---|---|
| ಕ್ರ.ಸಂ | ಜಿಲ್ಲೆ | ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ |
| 1 | ಬೆಂಗಳೂರು ನಗರ (ಬಿಬಿಎಂಪಿ ಹೊರತುಪಡಿಸಿ) | 36 |
| 2 | ಬೆಂಗಳೂರು ಗ್ರಾಂ | 48 |
| 3 | ರಾಮನಗರ | 62 |
| 4 | ಚಿತ್ರದುರ್ಗ | 80 |
| 5 | ದಾವಣಗೆರೆ | 80 |
| 6 | ಕೋಲಾರ | 63 |
| 7 | ಚಿಕ್ಕಬಳ್ಳಾಪುರ | 57 |
| 8 | ಶಿವಮೊಗ್ಗ | 93 |
| 9 | ತುಮಕೂರು | 144 |
| 10 | ಬಾಗಲಕೋಟೆ | 49 |
| 11 | ಬೆಳಗಾವಿ | 137 |
| 12 | ವಿಜಯಪುರ | 63 |
| 13 | ಧಾರವಾಡ | 33 |
| 14 | ಗದಗ | 39 |
| 15 | ಹಾವೇರಿ | 69 |
| 16 | ಉ.ಕನ್ನಡ | 83 |
| 17 | ಬಳ್ಳಾರಿ | 30 |
| 18 | ವಿಜಯನಗರ | 49 |
| 19 | ಬೀದರ್ | 53 |

| ಕ್ರ. ಸಂ | ಜಿಲ್ಲೆ | ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ |
|---|---|---|
| 20 | ಕಲಬುರಗಿ | 84 |
| 21 | ಯಾದಗಿರಿ | 41 |
| 22 | ಕೊಪ್ಪಳ | 46 |
| 23 | ರಾಯಚೂರು | 50 |
| 24 | ಚಾಮರಾಜನಗರ | 60 |
| 25 | ಚಿಕ್ಕಮಗಳೂರು | 90 |
| 26 | ದಕ್ಷಿಣ ಕನ್ನಡ | 66 |
| 27 | ಹಾಸನ | 134 |
| 28 | ಕೊಡಗು | 29 |
| 29 | ಮಂಡ್ಯ | 113 |
| 30 | ಮೈಸೂರು | 118 |
| 31 | ಉಡುಪಿ | 61 |
| | ರಾಜ್ಯದ ಒಟ್ಟು | 2160 |



ile No. HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)
enerated from eOffice by NAGARAJ R. HFW-JS2(NAG), JOINT SECRETARY 2, HEALTH AND FAMILY WELFARE SEC on 21/03/2026 04:21 PM

ಅನುಬಂಧ-2

National Urban Health Mission

Number of Urban Primary Health Centers - Districtwise

| Sl. No. | [redacted] | |
|---|---|---|
| 1 | Bagalkote | 7 |
| 2 | Ballari | 9 |
| 3 | Belagavi | 12 |
| 4 | Bengaluru Rural | 2 |
| 5 | Greater Bangalore Authority | 160 |
| 6 | Bidar | 6 |
| 7 | Chamarajanagara | 2 |
| 8 | Chikkaballapura | 4 |
| 9 | Chikkamagaluru | 2 |
| 10 | Chitradurga | 5 |
| 11 | Dakshina Kannada | 12 |
| 12 | Davangere | 11 |
| 13 | Dharwad | 19 |
| 14 | Gadag | 3 |
| 15 | Hassan | 4 |
| 16 | Haveri | 4 |
| 17 | Kalaburagi | 15 |
| 18 | Kodagu | 1 |
| 19 | Kolar | 9 |
| 20 | Koppal | 3 |
| 21 | Mandya | 3 |
| 22 | Mysuru | 23 |
| 23 | Raichur | 6 |
| 24 | Ramanagara | 4 |
| 25 | Shivamogga | 14 |
| 26 | Tumakuru | 6 |
| 27 | Udupi | 2 |
| 28 | Uttara Kannada | 3 |
| 29 | Vijayanagar | 5 |
| 30 | Vijayapura | 6 |
| 31 | Yadgir | 3 |
| | Total | 365 |

06/03/26

DEPUTY DIRECTOR

National Urban Health Mission

Arogya Soudha, Bengaluru-560...

ಅನುಬಂಧ - 3 [redacted]

ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ: | ಕಲ್ಯಾಣ ಕರ್ನಾಟಕ ಸಂಪೂರ್ಣ ಅಭಿವೃದ್ಧಿ ಯೋಜನೆ ಅಡಿ ಕಲ್ಯಾಣ ಕರ್ನಾಟಕ ಪ್ರದೇಶದ 7 ಜಿಲ್ಲೆಗಳಲ್ಲಿ ಹೊಸದಾಗಿ ವಿವಿಧ ಆರೋಗ್ಯ ಸಂಸ್ಥೆಗಳನ್ನು ಮಂಜೂರು ಮಾಡುವ ಮತ್ತು ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ |

<u>ಪ್ರಸ್ತಾವನೆ:</u>

1. ಆಯುಕ್ತರು, ಆರೋಗ್ಯ ಸೇವೆಗಳು ಇವರಿಂದ ಸ್ವೀಕೃತವಾದ ಪ್ರಸ್ತಾವನೆಯಲ್ಲಿ ರಾಜ್ಯದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳು ಹಿಂದುಳಿದ ಪ್ರದೇಶಗಳಾಗಿರುತ್ತದೆ. ಈ ಪ್ರದೇಶದಲ್ಲಿ IPHS ಮಾನದಂಡಗಳ ಪ್ರಕಾರ ಆರೋಗ್ಯ ಸೇವೆಗಳು ಲಭ್ಯವಿರುವುದಿಲ್ಲ. ಬೆಳಗಾವಿ, ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕೆ ಹೋಲಿಸಿದರೆ ಕಲಬುರಗಿ ವಿಭಾಗದಲ್ಲಿ ತಾಯಂದಿರ ಮರಣ ಪ್ರಮಾಣ (ಎಂಎಂಆರ್)ಹಾಗೂ ಮಕ್ಕಳ ಮರಣ ಪ್ರಮಾಣ ಮತ್ತು ಶಿಶು ಮರಣ ಪ್ರಮಾಣವು ಈ ಪ್ರದೇಶದಲ್ಲಿ ಹೆಚ್ಚಿದ್ದು, ತಾಯಿ, ಮಕ್ಕಳ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡಲು, ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವ ಅಗತ್ಯವಿದೆ. ಅಲ್ಲದೆ, ಈ ಪ್ರದೇಶದಲ್ಲಿ ವಾಸಿಸುವ ಜನರಿಗೆ ಪ್ರಾಥಮಿಕ ಮತ್ತು ದ್ವಿತೀಯ ಆರೋಗ್ಯ ಸೇವೆಗಳನ್ನು ಒದಗಿಸುವ ಸಲುವಾಗಿ ಹೊಸ ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅಸ್ತಿತ್ವದಲ್ಲಿರುವ ಆರೋಗ್ಯ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಲು ಆಡಳಿತಾತ್ಮಕ ಅನುಮೋದನೆ ಪಡೆಯಲು ಪ್ರಸ್ತಾಪಿಸಲಾಗಿದೆ
2. ಇತರ ವಿಭಾಗಗಳಿಗೆ ಹೋಲಿಸಿದರೆ ಕಲ್ಬುರ್ಗಿ ವಿಭಾಗದಲ್ಲಿ Out of pocket expenditure (OoPE) ಹೆಚ್ಚಾಗಿದೆ. ಆದ್ದರಿಂದ, ಈ ಪ್ರದೇಶದಲ್ಲಿ ಸಾರ್ವಜನಿಕ ಆರೋಗ್ಯ ಸೇವೆಯ ಮೂಲ ಸೌಕರ್ಯವನ್ನು ಬಲಪಡಿಸುವ ಮೂಲಕ ಜನರಿಗೆ ಸೇವೆಗಳಿಗಾಗಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುವ ಸಂಖ್ಯೆಯನ್ನು ಕಡಿಮೆ ಮಾಡುವುದು, ಮಾನವ ಸಂಪನ್ಮೂಲ ಲಭ್ಯತೆಯನ್ನು ಖಾತರಿಪಡಿಸುವುದು ಮತ್ತು ಖಾಸಗಿ ಆಸ್ಪತ್ರೆಗಳಿಗೆ ರೆಫರ್ ಮಾಡುವುದನ್ನು ಕಡಿಮೆ ಮಾಡಿ Out of pocket expenditureಅನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ.
3. ಇದೇ ರೀತಿಯ Ab-Ark ಅಡಿ ಖಾಸಗಿ ಆಸ್ಪತ್ರೆಯ ಕ್ಲೈಮ್‌ಗಳಿಗೆ ಅಂಕಿ ಅಂಶಗಳನ್ನು ಹೋಲಿಸಿದಾಗ, ಕಲ್ಯಾಣ ಕರ್ನಾಟಕ ಪ್ರದೇಶದ ಖಾಸಗಿ ಆಸ್ಪತ್ರೆಗಳು ಒಟ್ಟು ಖಾಸಗಿ ಕ್ಲೈಮ್‌ಗಳಲ್ಲಿ 5% ಮಾತ್ರ ಕ್ಲೈಮ್ ,ಮಾಡುತ್ತವೆ. ಇತರ ವಿಭಾಗಗಳಲ್ಲಿ / ಹೊರ ರಾಜ್ಯಗಳಿಗೆ ಚಿಕಿತ್ಸೆಗಾಗಿ ಪ್ರಯಾಣಿಸುವುದನ್ನು ತಡೆಯಲು, ಈ ಪ್ರದೇಶದಲ್ಲಿ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯವನ್ನು ಬಲಪಡಿಸುವುದು ಕಡ್ಡಾಯವಾಗಿರುತ್ತದೆ.
4. Indian Public Health Standards (IPHS) 2022 ಮಾನದಂಡಗಳ ಪ್ರಕಾರ, ಸರ್ಕಾರಿ ಆಸ್ಪತ್ರೆಗಳು ಪ್ರತಿ 1000 ಜನಸಂಖ್ಯೆಗೆ ಒಂದು ಹಾಸಿಗೆ ಒದಗಿಸಬೇಕಾಗುತ್ತದೆ. ಒದಗಿಸಲಾದ ವಿವರಗಳ ಪ್ರಕಾರ ಈ ಭಾಗದ ಒಟ್ಟು ಜನಸಂಖ್ಯೆ 1,22,88,692 ಇರುತ್ತದೆ. ಇದರಲ್ಲಿ ನಗರ ಜನಸಂಖ್ಯೆ 33,84,777 ಮತ್ತು ಗ್ರಾಮೀಣ ಜನಸಂಖ್ಯೆ 89,03,914 ಇರುತ್ತದೆ. IPHS ಮಾನದಂಡಗಳ ಪ್ರಕಾರ ಕೆಕೆಆರ್ ಡಿ ಬಿ ಪ್ರದೇಶದ 7 ಜಿಲ್ಲೆಗಳ ಜನಸಂಖ್ಯೆಯನ್ನು ಪರಿಗಣಿಸಿದಲ್ಲಿ 12289 ಹಾಸಿಗೆಗಳ ಅಗತ್ಯವಿರುತ್ತದೆ . ಪ್ರಸ್ತುತ ಕೆಕೆಆರ್ ಡಿಬಿ ಪ್ರದೇಶದಲ್ಲಿ 8316 ಹಾಸಿಗೆಗಳಿದ್ದು, 3973 ಹಾಸಿಗೆಗಳನ್ನು ಸ್ಥಾಪಿಸುವ ಅಗತ್ಯವಿರುತ್ತದೆ.
5. IPHS 2022 ಮಾನದಂಡಗಳ ಪ್ರಕಾರ, 2027 ರ ಯೋಜಿತ ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ 24 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 10 ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ 2027 ರ ಯೋಜಿತ ನಗರ ಜನಸಂಖ್ಯೆಗೆ ಅನುಗುಣವಾಗಿ 07 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 04 ನಗರ ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿರುತ್ತದೆ.
6. ತಾಲ್ಲೂಕು ಆಸ್ಪತ್ರೆ ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಲ್ಲಿ 70 ಪ್ರತಿಶತಕ್ಕಿಂತ ಹೆಚ್ಚು ರೋಗಿಗಳು ಆಸ್ಪತ್ರೆಗೆ

ದಾಖಲಾಗುತ್ತಿದ್ದು, ಕೆಲವು ಸಂದರ್ಭಗಳಲ್ಲಿ ಹಾಸಿಗೆಗಳ ಕೊರತೆಯಿಂದಾಗಿ ರೋಗಿಗಳನ್ನು ನೋಂದಾಯಿಸಲು ಮತ್ತು ಚಿಕಿತ್ಸೆ ನೀಡಲು ತೊಂದರೆ ಉಂಟಾಗುತ್ತಿದೆ. ಆದ್ದರಿಂದ, ಪರಿಣಾಮಕಾರಿ ಮತ್ತು ಲಭ್ಯವಿರುವ ಆರೋಗ್ಯ ಸೇವೆಗಳನ್ನು ಒದಗಿಸಲು ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ

7. ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ಆರೋಗ್ಯ ಸೇವೆಗಳಿಗೂ ಸಹ ಅತಿಯಾದ ಹೆಚ್ಚಿನ ಜನಸಂದಣಿ ಇರುತ್ತದೆ. ಈ ಹೆಚ್ಚಿನ ಜನಸಂದಣಿಯನ್ನು ಕಡಿಮೆ ಮಾಡಲು ಮತ್ತು ಹೆಚ್ಚಿನ ದ್ವಿತೀಯ ಮತ್ತು ತೃತೀಯ ಆರೋಗ್ಯ ಸೇವೆಗಳಿಗೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಲು, ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಇರುವ ಕಡೆ ಇಲಾಖೆಯಿಂದ ಹೆಚ್ಚುವರಿ ಜಿಲ್ಲಾ ಆಸ್ಪತ್ರೆಗಳನ್ನು ಸ್ಥಾಪಿಸಬೇಕಾಗಿರುತ್ತದೆ.
8. ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳು ಗಣಿ ಬಾಧಿತ ಪ್ರದೇಶಗಳಾಗಿವೆ ಮತ್ತು ಈ ಉದ್ಯಮದ ಹಾನಿಕಾರಕ ಪರಿಣಾಮಗಳಿಂದ ಉಂಟಾಗುವ ಸಾರ್ವಜನಿಕ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಆರೋಗ್ಯ ಸೇವೆಗಳನ್ನು ಉನ್ನತೀಕರಿಸುವ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ ತಜ್ಞರ ತಂಡ ಮತ್ತು ಇಲಾಖೆ ಅಧಿಕಾರಿಗಳು ಅಧ್ಯಯನ ನಡೆಸಿರುವಂತೆ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕೊರತೆಯಿರುವ 3973 ಹಾಸಿಗೆಗಳನ್ನು ಸ್ಥಾಪಿಸಲು ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆ:

( ಎ) ಹೊಸ 24 ಪ್ರಾಥಮಿಕ ಆರೋಗ್ಯ ಕೇಂದ್ರ, 10 ಸಮುದಾಯ ಆರೋಗ್ಯ ಕೇಂದ್ರ, 7 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ (UPHC) ಮತ್ತು 4 ನಗರ ಸಮುದಾಯ ಆರೋಗ್ಯ ಕೇಂದ್ರ (UCHC) ಗಳ ಸ್ಥಾಪನೆಯೊಂದಿಗೆ ಒಟ್ಟು 334 ಹಾಸಿಗೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

(ಬಿ) ಇನ್ನುಳಿದಂತೆ 3639 ಹಾಸಿಗೆಗಳ ಸ್ಥಾಪಿಸಲು ಅಸ್ತಿತ್ವದಲ್ಲಿರುವ 30 ಹಾಸಿಗೆಗಳ CHC ಗಳನ್ನು 50 ಹಾಸಿಗೆಗಳ FRU (First Referral Units) ಗಳಿಗೆ ನವೀಕರಿಸಲು ಪ್ರಸ್ತಾಪಿಸಲಾಗಿರುತ್ತದೆ. 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರದಲ್ಲಿ OBG, ಅನಸ್ತೇಷಿಯಾ ಮತ್ತು ಮಕ್ಕಳ ತಜ್ಞರುಕಾರ್ಯ ನಿರ್ವಹಿಸುತ್ತಾರೆ. 50 ಹಾಸಿಗೆಗಳ FRU ಗೆ ಉನ್ನತೀಕರಿಸುವ ಮೂಲಕ ಇನ್ನೂ ಇಬ್ಬರು ವಿಶೇಷ ತಜ್ಞರು ಅಂದರೆ, ಫಿಜಿಷಿಯನ್ ಮತ್ತು ಶಸ್ತ್ರಚಿಕಿತ್ಸಕರನ್ನು ನಿಯೋಜಿಸುವ ಮೂಲಕ ದ್ವಿತೀಯ ಆರೋಗ್ಯ ಸೇವೆಗಳನ್ನು ಫಲಾನುಭವಿಗಳಿಗೆ ವಿಸ್ತರಿಸಬಹುದಾಗಿರುತ್ತದೆ. ಅಂತೆಯೇ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಒಟ್ಟು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 50% ರಷ್ಟನ್ನು FRU ಗಳಿಗೆ ಉನ್ನತೀಕರಿಸಲು ಪ್ರಸ್ತಾಪಿಸಲಾಗಿದೆ. ಏಕೆಂದರೆ ಇವುಗಳು ಹೆಚ್ಚು ಜನಸಂಖ್ಯೆಯ ಪ್ರದೇಶಗಳಲ್ಲಿವೆ ಮತ್ತು ಇದಕ್ಕೆ ಸ್ಥಳೀಯರ ಬೇಡಿಕೆಯೂ ಸಹ ಇರುತ್ತದೆ. ಅಂತೆಯೇ 25 ಸಮುದಾಯ ಆರೋಗ್ಯ ಕೇಂದ್ರಗಳನ್ನು FRU ಗಳಾಗಿ ನವೀಕರಿಸಲು ಪ್ರಸ್ತಾಪಿಸಲಾಗಿದೆ.

(ಸಿ)ಹೊಸದಾಗಿ ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಲಾದ ಕಲಬುರಗಿ ಜಿಲ್ಲೆಯ ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 100 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಹಾಗೂ ಉಳಿದಂತೆ ಹೊಸ ತಾಲ್ಲೂಕು ಕೇಂದ್ರವಾಗಿ ಘೋಷಿಸಲ್ಪಟ್ಟ ಆರು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರಗಳನ್ನು 100 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾಪಿಸಲಾಗಿದೆ.

(ಡಿ) ಕೆಕೆಆರ್ ಡಿಬಿ ಪ್ರದೇಶದ 12 ಉಪವಿಭಾಗೀಯ ಕೇಂದ್ರಗಳ 100 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆಗಳನ್ನು 150 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆಗಳಿಗೆ ಉನ್ನತೀರಿಸಲು ಪ್ರಸ್ತಾಪಿಸಲಾಗಿದೆ. ಏಕೆಂದರೆ ಇವುಗಳು ಇತರ ತಾಲ್ಲೂಕು ಆಸ್ಪತ್ರೆಗಳಿಗೆ ಹೋಲಿಸಿದರೆ ಹೆಚ್ಚಿನ ಜನಸಂಖ್ಯೆಯನ್ನು ಒಳಗೊಂಡಿರುತ್ತದೆ. ಹಲವು ಆಸ್ಪತ್ರೆಗಳಲ್ಲಿ ಹಾಸಿಗೆಗಳ ಬಳಕೆ ಪ್ರಮಾಣವು 70% ಕ್ಕಿಂತ ಹೆಚ್ಚಿರುವುದರಿಂದ ಉನ್ನತೀಕರಿಸಲು ಸಮರ್ಥನೀಯವಾಗಿರುತ್ತದೆ. ಆದರೆ, ಕೆಲವು ಆಸ್ಪತ್ರೆಗಳಲ್ಲಿ ಹಾಸಿಗೆಗಳ ಬಳಕೆ ಪ್ರಮಾಣವು 70% ಕ್ಕಿಂತ

[illegible], ಇದು IPHS [illegible] [illegible] IPHS [illegible] 100 ಹಾಸಿಗೆಗಳಿಂದ 150 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಅಗತ್ಯತೆಯನ್ನು [illegible].

(ಇ) ಬಸವಕಲ್ಯಾಣ ಮತ್ತು ಲಿಂಗಸೂಗೂರು ಉಪವಿಭಾಗ ಆಸ್ಪತ್ರೆಗಳನ್ನು ಸ್ವತಂತ್ರ ಜಿಲ್ಲಾ ಆಸ್ಪತ್ರೆಗಳನ್ನಾಗಿ ಸ್ಥಾಪಿಸುವ ಬಗ್ಗೆ: ವೈದ್ಯಕೀಯ ಹೊಸ ವಿದ್ಯಾಲಯಗಳನ್ನು ಸ್ಥಾಪಿಸುವ ಸಲುವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲಾಗಿರುವ ಜಿಲ್ಲಾ ಕೇಂದ್ರಗಳಲ್ಲಿ ಸ್ವತಂತ್ರ ಜಿಲ್ಲಾ ಆಸ್ಪತ್ರೆಗಳನ್ನು ಸ್ಥಾಪಿಸುವ ಅಗತ್ಯತೆ ಇರುತ್ತದೆ.

ಕೆಕೆಆರ್‌ಡಿಬಿ ಪ್ರದೇಶದಲ್ಲಿ ನಾಲ್ಕು ಸ್ವತಂತ್ರ ಜಿಲ್ಲಾ ಆಸ್ಪತ್ರೆಗಳನ್ನು ಹೊಂದಲು ಅರ್ಹವಿರುತ್ತದೆ. ಜನಸಂಖ್ಯೆಯ ಆಧಾರದ ಮೇಲೆ ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳ ಹೊರತುಪಡಿಸಿ ಇತರ ಆಸ್ಪತ್ರೆಗಳು ಇಲ್ಲ ಎಂಬ ಕಾರಣಕ್ಕಾಗಿ ಮೊದಲ ಹಂತದಲ್ಲಿ ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ 200 ಹಾಸಿಗೆಗಳನ್ನು ಹೊಂದಿರುವ ಸ್ವತಂತ್ರ ಜಿಲ್ಲಾ ಆಸ್ಪತ್ರೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ, ಬೀದರ್ ಮತ್ತು ರಾಯಚೂರಿನಲ್ಲಿ ಸ್ವತಂತ್ರ ಜಿಲ್ಲಾ ಆಸ್ಪತ್ರೆಗಳನ್ನು ಸ್ಥಾಪಿಸುವುದರಿಂದ ಹೆಚ್ಚುವರಿ ಮಾನವ ಸಂಪನ್ಮೂಲದ ಅಗತ್ಯವಿರುವುದಿಲ್ಲ, ಏಕೆಂದರೆ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾನವ ಸಂಪನ್ಮೂಲವನ್ನು ಸ್ಥಳಾಂತರಿಸಬಹುದಾಗಿರುತ್ತದೆ. ಇದಲ್ಲದೆ, ಬೀದರ್ ಮತ್ತು ರಾಯಚೂರು ಜಿಲ್ಲೆಗಳ ಉದ್ದೇಶಿತ ಜಿಲ್ಲಾಆಸ್ಪತ್ರೆಗಳು ಜಿಲ್ಲಾಕೇಂದ್ರದಿಂದ ದೂರದಲ್ಲಿರುತ್ತವೆ. ಬಸವಕಲ್ಯಾಣವು ರಾಷ್ಟ್ರೀಯ ಹೆದ್ದಾರಿಯ ಬಳಿ ಇರುವುದರಿಂದ, ಪ್ರಸ್ತಾಪಿತ ಜಿಲ್ಲಾ ಆಸ್ಪತ್ರೆಯ ತೀವ್ರ ರೋಗಿಗಳಿಗೆ ಸಹ ಸೇವೆ ಒದಗಿಸುತ್ತದೆ. ಅದೇ ರೀತಿ, ರಾಯಚೂರು ಜಿಲ್ಲೆಯ ಜನಸಂಖ್ಯೆಗೆ ಉಪಯುಕ್ತವಾಗುವಂತೆ ಲಿಂಗಸೂರು ಉಪವಿಭಾಗೀಯ ಆಸ್ಪತ್ರೆಯನ್ನು 200 ಹಾಸಿಗೆಗಳ ಜಿಲ್ಲಾಆಸ್ಪತ್ರೆಯಾಗಿ ನವೀಕರಿಸಲು ಪ್ರಸ್ತಾಪಿಸಲಾಗಿದೆ. ಇದು ಬಾಗಲಕೋಟೆಜಿಲ್ಲೆಯ ಗಡಿಪ್ರದೇಶದ ಜನಸಂಖ್ಯೆಗೆ ಸಹಉಪಯುಕ್ತವಾಗುತ್ತದೆ. .

(ಎಫ್) ಜಿಲ್ಲಾಆಸ್ಪತ್ರೆಯನ್ನು 250 ಹಾಸಿಗೆಗಳಿಂದ 300 ಹಾಸಿಗೆಗಳ ಆಸ್ಪತ್ರೆಗೆ ಮೇಲ್ದರ್ಜೆಗೇರಿಸುವ ಬಗ್ಗೆIPHS ನಿಯಮಗಳ ಪ್ರಕಾರ 10 ರಿಂದ 20 ಲಕ್ಷಜನಸಂಖ್ಯೆಗೆ 300 ಹಾಸಿಗೆಗಳ ಜಿಲ್ಲಾಆಸ್ಪತ್ರೆ ಅಗತ್ಯವಿರುತ್ತದೆ ಗಣಗಾರಿಕೆ ಪೀಡಿತ ಜನಸಂಖ್ಯೆಯ ಕಾಯಿಲೆಯ ಹೊರೆಯನ್ನು ಪರಿಗಣಿಸಿ ಕೆಎಂಇಆರ್‌ಸಿ ಅನುದಾನದಡಿ 250 ಹಾಸಿಗೆಗಳ ನಿರ್ಮಾಣ ಹಂತದಲ್ಲಿರುವ ಹೊಸಪೇಟೆ ಜಿಲ್ಲಾಆಸ್ಪತ್ರೆಯನ್ನು 300 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗುವುದು

ಆರೋಗ್ಯ ಮೂಲಸೌಕರ್ಯದಲ್ಲಿ ಸುಧಾರಣೆಯ ಜೊತೆಗೆ, KKRDB ಪ್ರದೇಶದ ಮೇಲೆ ಕೇಂದ್ರೀಕರಿಸಿ ತಾಂತ್ರಿಕ ಬೆಂಬಲಕ್ಕಾಗಿ CSR ಮತ್ತು NGO ಗಳನ್ನು ಒಳಗೊಳ್ಳುವ ಮೂಲಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತರಬೇತಿ ಸಂಸ್ಥೆಗಳನ್ನು ಬಲಪಡಿಸುವ ಮೂಲಕ ಕೇಂದ್ರೀಕೃತ ತರಬೇತಿಯ ಮೂಲಕ ಆರೋಗ್ಯ ಸೇವಾವಿತರಣೆಗಳಲ್ಲಿ ಗುಣಮಟ್ಟವನ್ನು ಸುಧಾರಿಸಲು ಆರೋಗ್ಯ ಸಿಬ್ಬಂದಿಯ ಸಾಮರ್ಥ್ಯವನ್ನು ಸುಧಾರಿಸಲು ಪ್ರಸ್ತಾಪಿಸಲಾಗಿದೆ.

ಹೆಚ್ಚುವರಿಯಾಗಿ, ಮುಂದಿನ ಎರಡು ವರ್ಷಗಳಲ್ಲಿ ಎಲ್ಲಾ ಆರೋಗ್ಯ ಸೌಲಭ್ಯಗಳು ಗುಣಮಟ್ಟದ ಮಾನ್ಯತೆಯನ್ನು ಸಾಧಿಸುವುದನ್ನು ಖಚಿತಪಡಿಸಿಕೊಳ್ಳಲು, KKRDB ಪ್ರದೇಶಕ್ಕಾಗಿ NABH, NQAS, QAI, ಇತ್ಯಾದಿಗಳಂತಹ ಅನುಮೋದಿತ ಮಾನ್ಯತೆ ಏಜೆನ್ಸಿಗಳ ಸೇವೆಗಳೊಂದಿಗೆ ಪ್ರತ್ಯೇಕ PMU ಅನ್ನು ಸ್ಥಾಪಿಸಲು ಯೋಜಿಸಲಾಗಿರುತ್ತದೆ.

ಕೆಕೆಆರ್‌ಡಿಬಿ ಪ್ರದೇಶದ ಜಿಲ್ಲೆಗಳಲ್ಲಿ ಸ್ಥಾಪಿಸಲು ಪ್ರಸ್ತಾಪಿಸಿರುವ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಅನಾವರ್ತ ವೆಚ್ಚ (ಸಿವಿಲ್, ಉಪಕರಣಗಳು ಮತ್ತು ಪೀಠೋಪಕರಣಗಳು) ಮತ್ತು ಮಾನವ ಸಂಪನ್ಮೂಲಕ್ಕಾಗಿ ಅಗತ್ಯವಿರುವ ಆವರ್ತಕ ವೆಚ್ಚ ವಿವರಗಳು ಈ ಕೆಳಕಂಡಂತಿವೆ:

**Table-1: -** The requirement of Capital cost (Civil, Equipment's and Furniture)

Budget: Rs. in Lakhs

| SL. No | Institution Name | No. of proposed Institution | Per unit cost | Already existing buildings | Total Capital Cost (Civil, Equipment's and Furniture) | Grants available under 15th FC/NHM | Grants likely available under KKROB | Grants likely available under KMERC/DMF funds | Net grants required from the state |
|---|---|---|---|---|---|---|---|---|---|
| 1 | PHC | 24 | 400.00 | 0 | 9600.00 | 3120 | 3280 | 3200.00 | 0 |
| 2 | PHC to CHC | 10 | 1400.00 | 2 | 11200.00 | 4400.00 | 5600.00 | | 1200.00 |
| 3 | UPHC | 7 | 118.00 | 0 | 826.00 | 0 | 413.00 | 0 | 413.00 |
| 4 | UCHC | 4 | 2000.00 | 0 | 8000.00 | 0 | 4000.00 | 0 | 4000.00 |
| 5 | Upgradation of PHC to 100 bed CHC | 1 | 4200.00 | 0 | 4200.00 | 550.00 | 2100.00 | 0 | 1550.00 |
| 6 | Upgradation of CHC 30 bed to 50 bed CHC ( FRU) | 25 | 645.00 | 0 | 16125.00 | 0 | 7095.00 | 1935.00 | 7095.00 |
| 7 | Upgradation of 30 bed CHC to 100 bed CHC | 6 | 4200.00 | 2 | 16800.00 | 8400.00 | 0 | 0 | 8400.00 |
| 8 | Upgradation of T.H 100 to 150 bed | 9 | 1650.00 | 0 | 13200.00 | 0 | 6600.00 | 1650.00 | 6600.00 |
| 9 | New D.H (by adding 50 beds to 150 bed proposed sub divisional hospital) | 2 | 2875.00 | 0 | 5750.00 | 2875.00 | 2875.00 | 0 | 0 |
| Total | | | | | 85701.00 | 19345.00 | 31963.00 | 6785.00 | 29258.00 |

**Table-2: - The requirement of recurrent cost for human Resource**

Budget: Rs. In Lakhs

| SL. No | Institution Name | No. of Institution | Total HR | Recurring cost for HR per annum |
|---|---|---|---|---|
| 1 | PHC | 24 | 192 | 1458.48 |
| 2 | CHC | 10 | 330 | 2177.10 |
| 3 | UPHC | 7 | 56 | 425.39 |
| 4 | UCHC | 4 | 132 | 1094.40 |
| 5 | Upgradation of PHC to 100 bed CHC | 1 | 80 | 674.50 |
| 6 | Upgradation of CHC 30 to 50 bed | 25 | 350 | 2811.12 |
| 7 | Upgradation of 30 to 100 bed | 6 | 330 | 2781.60 |

| | | | | |
|---|---|---|---|---|
| 8 | Upgradation of TH 100 to 150 bed | 9 | 45 | 448.74 |
| 9 | New DH | 2 | 306 | 2489.50 |
| 10 | MCH | 1 | 12 | 145.00 |
| Total | | 89 | 1913 | 14505.83 |

IPHS ಮಾನದಂಡಗಳ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರ ಸಮುದಾಯ ಆರೋಗ್ಯ ಕೇಂದ್ರಗಳ ವಿಶ್ಲೇಷಣ ಅನ್ವಯ ಕೆಲವು ಪ್ರದೇಶಗಳಲ್ಲಿ ಹೆಚ್ಚುವರಿ ಮತ್ತು ಇತರ ಪ್ರದೇಶಗಳಲ್ಲಿ ಕೊರತೆಯಿರುತ್ತದೆ. ಆದರೆ, ಇಲಾಖೆಯಲ್ಲಿ ಹೆಚ್ಚುವರಿ ಇಂದ ಕೊರತೆಯ ಪ್ರದೇಶಗಳಿಗೆ ಈ ಆರೋಗ್ಯ ಸಂಸ್ಥೆಗಳನ್ನು ಸ್ಥಳಾಂತರಿಸಲು ಯಾವುದೇ ಸಾಮಾನ್ಯ ನೀತಿಯನ್ನು ರೂಪಿಸಿಕೊಂಡಿರುವುದಿಲ್ಲ. ಆದ್ದರಿಂದ, ಕೊರತೆಯ ಪ್ರದೇಶಗಳಲ್ಲಿ ಅತ್ಯುತ್ತಮ ಆರೋಗ್ಯ ಸೇವೆಗಳನ್ನು ಪೂರೈಸಲು ಹೊಸದಾಗಿ ವಿವಿಧ ಆರೋಗ್ಯ ಸಂಸ್ಥೆಗಳನ್ನು ಮಂಜೂರು ಮಾಡುವ ಮತ್ತು ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 391 ಸಿಜಿಎ 2022
ಬೆಂಗಳೂರು, ದಿನಾಂಕ: 27 .09 . 2024

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ , ಕಲ್ಯಾಣ ಕರ್ನಾಟಕ ಸಂಪೂರ್ಣ ಆರೋಗ್ಯ ಅಭಿವೃದ್ಧಿ ಯೋಜನೆ ಅಡಿ ಕಲ್ಯಾಣ ಕರ್ನಾಟಕ ಭಾಗದ ಹಿಂದುಳಿದ ಪ್ರದೇಶದಲ್ಲಿ ಆರೋಗ್ಯ ಸೇವೆಗಳ ಲಭ್ಯತೆಯನ್ನು ಸುಧಾರಿಸಲು ಮತ್ತು ಜನರಿಗೆ ಪರಿಣಾಮಕಾರಿಯಾದ ಮತ್ತು ಗುಣಮಟ್ಟದ ಸೇವೆಗಳನ್ನು ಒದಗಿಸಲು, IPHS ಮಾನದಂಡಗಳ ಪ್ರಕಾರ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವುದು ಮತ್ತು ಈ ಪ್ರದೇಶದಲ್ಲಿ ಆರೋಗ್ಯ ಸಂಸ್ಥೆಗಳನ್ನು ಹೆಚ್ಚಿಸುವುದು ಅಗತ್ಯವಿರುವ ಹಿನ್ನಲೆಯಲ್ಲಿ 15ನೇ ಹಣಕಾಸು ಆಯೋಗ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ರೂ. 19345.00 ಲಕ್ಷಗಳ ಅನುದಾನ, ಕೆಕೆಆರ್‌ಡಿಬಿ ಅನುದಾನದಿಂದ ರೂ 31963.00 ಲಕ್ಷಗಳು ಕೆಎಂಇಆರ್‌ಸಿ / ಡಿಎಂಎಫ್ ಅನುದಾನದಿಂದ ರೂ. 6785.00 ಲಕ್ಷಗಳು ಮತ್ತು ರಾಜ್ಯ ಸರ್ಕಾರದಿಂದ ರೂ. 29258.00 ಲಕ್ಷಗಳ ಅನುದಾನದಿಂದ ಭರಿಸಿ ಈ ಆದೇಶದ ಅನುಬಂಧ-1 ರಿಂದ 8 ರಲ್ಲಿರುವ ವಿವಿಧ ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸಲು ಹಾಗೂ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಅನುಮೋದನ ನೀಡಲಾಗಿದೆ.

1. ಅನುಬಂಧ 1 ರಲ್ಲಿರುವಂತೆ ಬಳ್ಳಾರಿ, ಕೊಪ್ಪಳ, ರಾಯಚೂರು, ವಿಜಯನಗರ, ಯಾದಗಿರಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅನುದಾನದಲ್ಲಿ ಒಟ್ಟು 24 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ
2. ಅನುಬಂಧ - 2 ರಲ್ಲಿರುವಂತೆ ಬೀದರ್, ಕಲಬುರಗಿ, ಕೊಪ್ಪಳ, ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೊಸದಾಗಿ 7 ನಗರ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ
3. ಅನುಬಂಧ-3 ರಲ್ಲಿರುವಂತೆ ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯನಗರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಒಟ್ಟು 10 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು
4. ಅನುಬಂಧ-4 ರಲ್ಲಿರುವಂತೆ ಬೀದರ್, ಕಲಬುರಗಿ, ರಾಯಚೂರು ಜಿಲ್ಲೆಗಳಲ್ಲಿ ಹೊಸದಾಗಿ 4 ನಗರ ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ
5. ಅನುಬಂಧ - 5 ರಲ್ಲಿರುವಂತೆ ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯನಗರ, ಯಾದಗಿರಿ ಜಿಲ್ಲೆಗಳಲ್ಲಿನ 30 ಹಾಸಿಗೆಗಳ 25 ಸಮುದಾಯ ಆರೋಗ್ಯ ಕೇಂದ್ರಗಳನ್ನು 50 ಹಾಸಿಗೆಗಳ FRUs ಗಳಿಗೆ ಮೇಲ್ದರ್ಜೆಗೇರಿಸಲು
6. ಅನುಬಂಧ-6 ರಲ್ಲಿರುವಂತೆ ಕಲಬುರಗಿ ಜಿಲ್ಲೆಯ ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 100 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಹಾಗೂ ಬಳ್ಳಾರಿ, ಕಲಬುರಗಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ 30 ಹಾಸಿಗೆಗಳ 06 ಸಮುದಾಯ ಆರೋಗ್ಯ ಕೇಂದ್ರಗಳನ್ನು 100 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲು
7. ಅನುಬಂಧ-7 ರಲ್ಲಿರುವಂತೆ ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ವಿಜಯನಗರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿನ 100 ಹಾಸಿಗೆಗಳ 09 ತಾಲ್ಲೂಕು ಆಸ್ಪತ್ರೆಗಳನ್ನು 150 ಹಾಸಿಗೆಗಳ ಉಪವಿಭಾಗೀಯ ಆಸ್ಪತ್ರೆಗಳಿಗೆ ಮೇಲ್ದರ್ಜೆಗೇರಿಸಲು
8. ಅನುಬಂಧ-8 ರಲ್ಲಿರುವಂತೆ ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವ 100 ಹಾಸಿಗೆಗಳ 2 ತಾಲ್ಲೂಕು ಆಸ್ಪತ್ರೆಗಳನ್ನು 200 ಹಾಸಿಗೆಗಳ ಹೊಸ ಜಿಲ್ಲಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು

2. ಮುಂದುವರೆದು, ಮೇಲ್ಕಂಡ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ವಿವಿಧ ವೃಂದದ 1913 ಮಾನವ ಸಂಪನ್ಮೂಲ ವೆಚ್ಚವನ್ನು ಮೊದಲ 3 ವರ್ಷಗಳಿಗೆ KKRDB/KMERC ಅನುದಾನದಿಂದ ಭರಿಸಲು ಹಾಗೂ ನಂತರ ರೂ. 145.05 ಕೋಟಿ ಅಂದಾಜು ವಾರ್ಷಿಕ ವೆಚ್ಚವನ್ನು ರಾಜ್ಯ ಸರ್ಕಾರದ ಅನುದಾನದಿಂದ ಭರಿಸತಕ್ಕದ್ದು.

3. ಆರೋಗ್ಯ ಸಂಸ್ಥೆಗಳು CSR ಪಾಲುದಾರರು /NGO ಗಳ ಸಹಯೋಗದೊಂದಿಗೆ ತರಬೇತಿ ಸೌಲಭ್ಯಗಳನ್ನು

ಸೂಕ್ಷ್ಮ ಉಪನಿಷುವಿಕೆಯನ್ನು ಬಲಪಡಿಸಿಕೊಳ್ಳುವುದು ಮತ್ತು ಸ್ಥಾಪಿಸುವ ಮೂಲಕ ಮುಂದಿನ ಎರಡು ವರ್ಷಗಳಲ್ಲಿ ಆರೋಗ್ಯ ಸೌಲಭ್ಯಗಳ ಮಾನ್ಯತೆಯನ್ನು ಸಾಧಿಸಲು ಗುಣಮಟ್ಟದ ಪ್ರಮಾಣೀಕರಣವನ್ನು ಬಲಪಡಿಸಲು NQAS, NABH, ಇತ್ಯಾದಿ ಅನುಮೋದಿತ ಏಜೆನ್ಸಿಗಳ ಸಹಾಯದಿಂದ Project Monitoring Unit ಸ್ಥಾಪಿಸಲು

3. ಮೇಲಿನ ಯೋಜನ / ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಹಂತಹಂತವಾಗಿ ಅಗತ್ಯವಿರುವ ಯಂತ್ರೋಪಕರಣಗಳ ಖರೀದಿ ಹಾಗೂ ಮೂಲಸೌಕರ್ಯಗಳ ಕಾಮಗಾರಿಗಳನ್ನು ಸೇರಿದಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇವರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ

ಆರ್ಥಿಕ ಇಲಾಖೆಯ ಷರತ್ತುಗಳು:

1. Commitment Letter from the KKRDB should be obtained for meeting their part of capital and O&M costs.

2. Commitment of KMERC should be obtained with the approval of the KMERC Board and the OA.

3. The availability of funding under NHM and 15 FC should be ascertained to the satisfaction of the Finance Department on file.

4. Population norms as per the projection for 2027 and distance norm should be adhered to.

5.The estimation of the O&M should be realistic and should include the cost of human resource and drugs/consumables.

6. These proposals are concurred as a special case in view of the Health infra deficit of Kalyan Karnataka region and this should not be used as a precedent for the other cases who may like to bring analogous proposals.

7. To submit comprehensive proposal with data on file along with the proposals for creation of posts.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 123 ವೆಚ್ಚ-5/2023 ದಿನಾಂಕ:15.09.2024 ಹಾಗೂ ಯೋಜನಾ ಇಲಾಖೆ ಸಹಮತಿ ಮತ್ತು ಸಚಿವ ಸಂಪುಟದ ನಿರ್ಣಯ ಸಂಖ್ಯೆ:ಸಿ 532/2024 ದಿನಾಂಕ:17.09.2024ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
14.10.2024
(ಪದ್ಮ.ವಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆರೋಗ್ಯ 1&2

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)/(ಇ & ಆರ್ಎಸ್ಎ), ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ-5398, ಬೆಂಗಳೂರು-01
2. ಪ್ರಧಾನ ಮಹಾಲೇಖಪಾಲರು (ಎ & ಇ), ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ-5329, ಬೆಂಗಳೂರು- 01.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
5. ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ.
6. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ ಬೆಂಗಳೂರು.
7.ಮುಖ್ಯ ಇಂಜಿನಿಯರ್, ಇಂಜಿನಿಯರಿಂಗ್ ಘಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಮಾಗಡಿ ರಸ್ತೆ ಬೆಂಗಳೂರು.
8.ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ
9. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ ಬೆಂಗಳೂರು .
10.ಜಂಟಿ ನಿರ್ದೇಶಕರು (ಯೋಜನೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ ಮಾಗಡಿ ರಸ್ತೆ, ಬೆಂಗಳೂರು.
11.ಹಿರಿಯ ಜಂಟಿ ನಿರ್ದೇಶಕರು ಹಾಗೂ ಪದನಿಮಿತ್ತ ಜಂಟಿ ಕಾರ್ಯದರ್ಶಿ, ಎಡಿಬಿ ವಿಭಾಗ,ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ.
12.ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ (ವಿಷಯ ಸಂಖ್ಯೆ ಸಿ 125/2024) ವಿಧಾನಸೌಧ, ಬೆಂಗಳೂರು
13. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-5 ಆರ್ಥಿಕ ಇಲಾಖೆ,ವಿಧಾನಸೌಧ, ಬೆಂಗಳೂರು
11. ಶಾಖೆಯ ರಕ್ಷಾ ಕಡತ: ಹೆಚ್ಚಿನ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ</u>

## ಅನುಬಂಧ -I

### ಪ್ರಾಥಮಿಕ ಆರೋಗ್ಯ ಕೇಂದ್ರಗಳು

| ಜಿಲ್ಲೆಯಹೆಸರು | ಪ್ರಾಥಮಿಕ ಆರೋಗ್ಯ ಕೇಂದ್ರ. | ಷರಾ |
|---|---|---|
| ಬಳ್ಳಾರಿ | ಕೊರಕೊಪ್ಪ, ಯಶವಂತನಗರ, ಭುಜಂಗನಗರ, ಹೊಸದರೋಜಿ. | 4 |
| ಬೀದರ್ | | 0 |
| ಕಲಬುರಗಿ | | 0 |
| ಕೊಪ್ಪಳ | ಲಿಂಗದಹಳ್ಳಿ | 4 |
| | ಹಿರೇಬನ್ನಿಗೋಳ | |
| | ಜಿರಾಳ | |
| | ಗೌರಿಪುರ | |
| ರಾಯಚೂರು | ಯದಲಾಪುರ | 8 |
| | ಸಂಗಮಕುಂಟ | |
| | ಬಾಗಲವಾಡ | |
| | ರಾಜಲಬಂಡ | |
| | ಮುಷ್ಟೂರು | |
| | ಹಲಕೋಡ | |
| | ಕೋತದೊಡ್ಡಿ | |
| | ಗುಂಡ | |
| ವಿಜಯನಗರ | ಕೆಲ್ಲಹಳ್ಳಿ | 4 |
| | ಚಿಲಕನಹಟ್ಟಿ | |
| | ನಾಗಿನಹಳ್ಳಿ | |
| | ಪಾಪಿನಾಯಕನಹಳ್ಳಿ | |
| ಯಾದಗಿರಿ | ಮುದನೂರು | 4 |
| | ನಾರಾಯಣಪುರ | |
| | ಹೆಗ್ಗಣದೊಡ್ಡಿ | |
| | ತಿಂಟಣಿ | |
| | ಒಟ್ಟು | 24 |

Padma. V
Under Secretary to Government
Health & Family Welfare Department

<u>ಅನುಬಂಧ-2</u>

## ಹೊಸದಾಗಿಪ್ರಸ್ತಾವಿಸಿರುವನಗರಆರೋಗ್ಯಕೇಂದ್ರಗಳು

| ಜಿಲ್ಲೆಯಹೆಸರು | ಉದ್ದೇಶಿತಸ್ಥಳ | ಸಂಖ್ಯೆಗಳು |
|---|---|---|
| ಬೀದರ್ | ಹುಮುನಾಬಾದ್ | 2 |
| | ಬಾಲ್ಕಿ | |
| ಕಲಬುರಗಿ | ರಾಜಾಪುರ | 3 |
| | ಸಂತೋಷ್ ಕಾಲೋನಿ | |
| | ನಯಾಮೊಹಲ್ಲಾ | |
| ಕೊಪ್ಪಳ | ಕೊಪ್ಪಳನಗರ | 1 |
| ರಾಯಚೂರು | ಮಾನ್ವಿ | 1 |
| ಒಟ್ಟು | | 7 |

Padma. V
Under Secretary to Government
Health & Family Welfare Department

## ಅನುಬಂಧ -3

### ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮೇಲ್ದರ್ಜೆಗೇರಿಸುವುದು

| ಜಿಲ್ಲೆಯಹೆಸರು | ಸಮುದಾಯ ಆರೋಗ್ಯ ಕೇಂದ್ರ | ಷರಾ |
|---|---|---|
| ಬಳ್ಳಾರಿ | | 30 ಹಾಸಿಗೆ |
| ಬೀದರ್ | ಜನವಾಡ | 30 ಹಾಸಿಗೆ |
| ಕಲಬುರಗಿ | ಇಜೇರಿ | |
| | ಫರತಾಬಾದ್ | |
| | ಹಿರೇಸಾವಳಗಿ | 30 ಹಾಸಿಗೆ |
| ಕೊಪ್ಪಳ | ಹನುಮಸಾಗರ | 30 ಹಾಸಿಗೆ |
| ರಾಯಚೂರು | ಗಬ್ಬೂರು | |
| | ಪೋತನಾಳ | |
| | ಹಟ್ಟಿ | 30 ಹಾಸಿಗೆ |
| ವಿಜಯನಗರ | ಮರಿಯಮ್ಮನಹಳ್ಳಿ | 30 ಹಾಸಿಗೆ |
| ಯಾದಗಿರಿ | ಗೋಗಿ | |
| ಒಟ್ಟು | | 10 |

Padma. V
Under Secretary to Government
Health & Family Welfare Department



File No. HFW/66/SMM/2026-HEALTH I-HEALTH AND FAMILY WELFARE SEC (Computer No. 2102412)
... NAGARAJ R, HFW-JS2(NAG), JOINT SECRETARY 2, HEALTH AND FAMILY WELFARE SEC on 21/03/2026 04:35 PM

## ಅನುಬಂಧ-II

### ಹೊಸದಾಗಿ ಸ್ಥಾಪಿಸಿರುವ ನಗರ ಸಮುದಾಯ ಆರೋಗ್ಯ ಕೇಂದ್ರಗಳು

| ಜಿಲ್ಲೆಯ ಹೆಸರು | ಸಂಖ್ಯೆಗಳು | ಉದ್ದೇಶಿತ ಸ್ಥಳ |
|---|---|---|
| ಬೀದರ್ | 1 | ಬೀದರ್ ನಗರ |
| ಕಲಬುರಗಿ | 2 | ಕಲಬುರಗಿನಗರ ಕಲಬುರಗಿನಗರ |
| ರಾಯಚೂರು | 1 | ರಾಯಚೂರುನಗರ |
| ಒಟ್ಟು | 4 | |

Padma
Under Secretary to Government
Health & Family Welfare Department

ಅನುಬಂಧ ೪

## ಸಮುದಾಯ ಆರೋಗ್ಯ ಕೇಂದ್ರವನ್ನು 30 ಹಾಸಿಗೆಯಿಂದ 50 ಹಾಸಿಗೆಗೆ ಮೇಲ್ದರ್ಜೆಗೇರಿಸುವುದು

| ಜಿಲ್ಲೆಯಹೆಸರು | ಸಮುದಾಯ ಆರೋಗ್ಯಕೇಂದ್ರ | ಷರಾ |
| --- | --- | --- |
| ಬಳ್ಳಾರಿ | ತೋರಣಗಲ | 30 ರಿಂದ 50 ಹಾಸಿಗೆ |
| | ತೆಕ್ಕಲಕೋಟ | |
| | ಮೋಕ | |
| | ರೂಪನಗುಡಿ | |
| ಬೀದರ್ | ಹುಲಸೂರು | 30 ರಿಂದ 50 ಹಾಸಿಗೆ |
| | ಕಮಲಾನಗರ | |
| | ಚಿತಗುಪ್ಪ | |
| | ಮನಕೇಡ | |
| | ನಿಟ್ಟೂರು | |
| | ರಾಜೇಶ್ವರ | |
| ಕಲಬುರಗಿ | ಕಾಳಗಿ | 30 ರಿಂದ 50 ಹಾಸಿಗೆ |
| | ಯಡ್ರಾಮಿ | |
| ಕೊಪ್ಪಳ | ಹಿರೇಸಿಂದಗಿ | 30 ರಿಂದ 50 ಹಾಸಿಗೆ |
| | ಮುನಿರಾಬಾದ | |
| | ತಾವರಗೇರಾ | |
| ರಾಯಚೂರು | ಮುದ್ಗಲ್ | 30 ರಿಂದ 50 ಹಾಸಿಗೆ |
| | ಕವಿತಾಲ್ | |
| | ಜಾಲಹಳ್ಳಿ | |
| | ಅರಕೇರ | |
| ವಿಜಯನಗರ | ಕೊಟ್ಟೂರು | 30 ರಿಂದ 50 ಹಾಸಿಗೆ |
| ಯಾದಗಿರಿ | ದೋರಣಹಳ್ಳಿ | 30 ರಿಂದ 50 ಹಾಸಿಗೆ |
| | ವಡಗೇರಾ | |
| | ಗುರುಮಿಟ್ಕಲ್ | |
| | ಹುಣಸಗಿ | |
| | ಕೆಂಭಾವಿ | |
| ಒಟ್ಟು | | 25 |

Padma ...
Under Secretary to Government
Health & Family Welfare Department



File No. HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)

## ಅನುಬಂಧ -: 6

### ಕಲಬುರಗಿ ಜಿಲ್ಲೆಯ ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 100 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವುದು. ಹಾಗೂ 30 ಹಾಸಿಗೆಯ ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸುವುದು

| ಜಿಲ್ಲೆಯಹೆಸರು | ಪ್ರಾಥಮಿಕ ಆರೋಗ್ಯಕೇಂದ್ರ | ಷರಾ |
|---|---|---|
| ಕಲಬುರಗಿ | ಕಮಲಾಪುರ | 06 ಹಾಸಿಗೆಯಿಂದ 100 ಹಾಸಿಗೆಗೆ |

| ಜಿಲ್ಲೆಯಹೆಸರು | ಸಮುದಾಯ ಆರೋಗ್ಯಕೇಂದ್ರ | ಷರಾ |
|---|---|---|
| ಬಳ್ಳಾರಿ | ಕಂಪ್ಲಿ | 30 ರಿಂದ 100 ಹಾಸಿಗೆ |
| | ಕುರುಗೋಡು | 30 ರಿಂದ 100 ಹಾಸಿಗೆ |
| ಕಲಬುರಗಿ | ಶಹಬಾದ | 30 ರಿಂದ 100 ಹಾಸಿಗೆ |
| ಕೊಪ್ಪಳ | ಕುಕನೂರು | |
| | ಕಾರಟಗಿ | |
| | ಕನಕಗಿರಿ | |
| ಒಟ್ಟು | | 06 |

Padma. V
Under Secretary to Government
Health & Family Welfare Department

ಅನುಬಂಧ - 7

# 100 ಹಾಸಿಗೆಗಳಿಂದ 150 ಹಾಸಿಗೆಗಳಿಗೆಮೇಲ್ದರ್ಜೆಗೇರಿಸುವುದು

| ಕ್ರ.ಸಂ | ಜಿಲ್ಲೆಯಹೆಸರು | ತಾಲ್ಲೂಕುಆಸ್ಪತ್ರೆ | ಹಾಸಿಗೆಗಳು |
|---|---|---|---|
| 1 | ಬಳ್ಳಾರಿ | ಸಿರಗುಪ್ಪ, ಸಂಡೂರು (ಕೆ.ಎಂ.ಇ.ಆರ್.ಸಿ) | 100 ರಿಂದ 150 |
| 2 | ಬೀದರ್ | ಭಾಲ್ಕಿ | |
| 3 | ಕಲಬುರಗಿ | ಸೇಡಂ | |
| | | ಚಿತ್ತಾಪುರ | |
| | | ಜೇವರ್ಗಿ | |
| 4 | ಕೊಪ್ಪಳ | ಗಂಗಾವತಿ | |
| 5 | ವಿಜಯನಗರ | ಕೂಡ್ಲಿಗಿ | |
| 6 | ಯಾದಗಿರಿ | ಶಹಾಪುರ | |
| | ಒಟ್ಟು | 09 | |

Padma. V
Under Secretary to Government
Health & Family Welfare Department



File No. HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)
Generated from eOffice by NAGARAJ R, HFW-JS2(NAG), JOINT SECRETARY 2, HEALTH AND FAMILY WELFARE SEC on 21/03/2026 04:35 PM

8

ಅನುಬಂಧ - 8

ಉಪವಿಭಾಗೀಯಆಸ್ಪತ್ರೆಗಳನ್ನುಜಿಲ್ಲಾಮಟ್ಟದಆಸ್ಪತ್ರೆಯನ್ನಾಗಿಮೇಲ್ದರ್ಜೆಗೇರಿಸುವಬಗ್ಗೆ

| ಜಿಲ್ಲೆಯಹೆಸರು | ಉದ್ದೇಶಿತಸ್ಥಳ |
|---|---|
| ಬೀದರ್ | ಉಪವಿಭಾಗೀಯಆಸ್ಪತ್ರೆಬಸವಕಲ್ಯಾಣ |
| ರಾಯಚೂರು | ಉಪವಿಭಾಗೀಯಆಸ್ಪತ್ರೆಲಿಂಗಸ್ಗೂರು |
| ಒಟ್ಟು | 2 |

Padma. V
Under Secretary to Government
Health & Family Welfare Department

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಹೊಸದಾಗಿ ಘೋಷಿಸಲಾದ ತಾಲ್ಲೂಕುಗಳಲ್ಲಿ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು non-FRU CHC (Block PHC) ಗಳನ್ನಾಗಿ ಮೇಲ್ದರ್ಜೆಗೇರಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ: -

1. 2025-26 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ- 138 (ii).
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 201 ಸಿಜಿಎಂ 2022, ದಿನಾಂಕ: 6.1.2025.
3. ಸರ್ಕಾರದ ಆದೇಶ ಸಂಖ್ಯೆ: ಆಕುಕ 3 ಸಿಜಿಇ 2025, ದಿನಾಂಕ: 3.5.2025.
4. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಏಕ ಕಡತ ಸಂ: HFWS-HSP12025 (1666272).
5. ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ.481/2025 ದಿನಾಂಕ: 2.7.2025.

****

ಪ್ರಸ್ತಾವನೆ: -

ಮೇಲೆ ಕ್ರಮ ಸಂಖ್ಯೆ 1 ರಲ್ಲಿ ಓದಲಾದ 2025-26ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ 138 (ii) ರಲ್ಲಿ "ಹೊಸದಾಗಿ ಘೋಷಿಸಲಾಗಿರುವ ತಾಲ್ಲೂಕುಗಳಾದ ಹನೂರು, ಅಳ್ನಾವರ, ಅಣ್ಣಿಗೇರಿ, ಮಸ್ಕಿ, ಸಿರಿವಾರ, ಕಾಪು, ಬಬಲೇಶ್ವರ, ಕೊಲ್ಹಾರ, ಚೇಳೂರು ಮತ್ತು ತೇರದಾಳದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಉನ್ನತೀಕರಿಸಲಾಗುವುದು. ಪೊನ್ನಂಪೇಟೆಯಲ್ಲಿ ಹೊಸದಾಗಿ ಸಮುದಾಯ ಆರೋಗ್ಯ ಕೇಂದ್ರವನ್ನು ಆರಂಭಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ. ಆರ್ಥಿಕ ಇಲಾಖೆಯು ಆಯವ್ಯಯ ಘೋಷಣೆಗಳ ಅನುಷ್ಠಾನದ ಮಾರ್ಗಸೂಚಿಯಲ್ಲಿ ಈ ಯೋಜನೆಗೆ KKRDB, KMERC ಹಾಗೂ NHH/ 15ನೇ ಹಣಕಾಸು ಆಯೋಗದಿಂದ ವೆಚ್ಚ ಭರಿಸಲು ತಿಳಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ 2 ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅನುದಾನದಲ್ಲಿ ಕಟ್ಟಡ ನಿರ್ಮಾಣ ಮಾಡಲಾದ 15 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿ, ಹಾಗೂ ಇವುಗಳಿಗೆ ಅಗತ್ಯವಿರುವ ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಮತ್ತು ಕಡಿಮೆ ಒತ್ತಡ ಇರುವ ಸ್ಥಳಗಳಿಂದ ಅವಶ್ಯವಿರುವ ಕೇಂದ್ರಗಳಿಗೆ ಸ್ಥಳಾಂತರಿಸಿಕೊಳ್ಳಲು ಅನುಮೋದನೆ ನೀಡಲಾಗಿದೆ. ಇದರಲ್ಲಿ, ಸಿರಿವಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ 3 ರಲ್ಲಿ ಓದಲಾದ ಆದೇಶದಲ್ಲಿ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ವಿವಿಧ ಆರೋಗ್ಯ ಸಂಸ್ಥೆಗಳನ್ನು ಅಗತ್ಯ ಹುದ್ದೆಗಳೊಂದಿಗೆ ಮೇಲ್ದರ್ಜೆಗೇರಿಸಲು ಅನುಮೋದನೆ ನೀಡಲಾಗಿದೆ. ಇದರಲ್ಲಿ, ಹನೂರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 50 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ ರೂ.2058.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಮೇಲ್ದರ್ಜೆಗೇರಿಸಲು ಅನುಮೋದನೆ ನೀಡಲಾಗಿದೆ

ಮೇಲೆ ಕ್ರಮ ಸಂಖ್ಯೆ 4 ರಲ್ಲಿ ಓದಲಾದ ಏಕ ಕಡತದಲ್ಲಿ, 2025-26 ನೇ ಸಾಲಿನ ಆಯವ್ಯಯ ಕಂಡಿಕೆ 138 (ii) ರನ್ವಯ ಹೊಸದಾಗಿ ಘೋಷಣೆಯಾಗಿರುವ ತಾಲ್ಲೂಕುಗಳ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸುವ / ಸ್ಥಾಪಿಸುವ ಕುರಿತು ಘೋಷಿಸಲಾಗಿದೆ. ಆದರೆ, ಆಯವ್ಯಯ ಘೋಷಣೆಯಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಉನ್ನತೀಕರಿಸುವ ಪರಿಕಲ್ಪನೆ ಬದಲಿಗೆ non-FRU CHC (Block PHC) ಯನ್ನಾಗಿ ಉನ್ನತೀಕರಿಸಲು, ಅಸ್ತಿತ್ವದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳನ್ನು ಉಪಯೋಗಿಸಿಕೊಳ್ಳುವುದರೊಂದಿಗೆ OT ಘಟಕಗಳನ್ನು ಕಡಿಮೆ ಮಾಡಿ ಅಗತ್ಯವಿದ್ದ ಸ್ಥಳ ಲಭ್ಯವಿರುವುದನ್ನು ಬಳಸಿಕೊಂಡು ವಿಸ್ತರಿಸಿಕೊಳ್ಳಬಹುದು. ಪ್ರಸ್ತುತ, ಮಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಈಗಾಗಲೇ NHM ಮತ್ತು ರಾಜ್ಯ ಅನುದಾನದಲ್ಲಿ ತೆಗೆದುಕೊಳ್ಳಲು ಪರಿಶೀಲನೆಯಲ್ಲಿದೆ. ಆದ್ದರಿಂದ, ಉಳಿದ 08 ತಾಲ್ಲೂಕುಗಳಲ್ಲಿ ಪೊನ್ನಂಪೇಟೆಯಲ್ಲಿ ಸ್ಥಾಪಿಸಲಾಗುವ ಹೊಸ ಸಮುದಾಯ ಆರೋಗ್ಯ ಕೇಂದ್ರದ ಬದಲಾಗಿ ಪೊನ್ನಂಪೇಟೆ ತಾಲ್ಲೂಕಿನ ಹುದಿಕೇರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾಪಿಸುತ್ತಾ, ಆಯವ್ಯಯ ಘೋಷಣೆಯಲ್ಲಿನ 08 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು non-FRU CHC (Block PHC) ಗಳನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವ ಈ ಹಿಂದಿನ ಪದ್ಧತಿಯ ಬದಲಾಗಿ non-FRU CHC (Block PHC ಗಳು) ಮಾತ್ರ ಸ್ಥಾಪಿಸುವ ಪ್ರಸ್ತಾವನೆಯು ನೆರೆಯ ತಮಿಳುನಾಡು ರಾಜ್ಯದಲ್ಲಿ ಅನುಸರಿಸುತ್ತಿರುವ non-FRU CHC (Block PHC) ಮಾದರಿಯಲ್ಲಿದ್ದು, ಪ್ರತಿ Block PHC ಯಲ್ಲಿ 5 ಎಂಬಿಬಿಎಸ್ ವೈದ್ಯರು ಇದ್ದರೆ, CHC ಯಲ್ಲಿ 1 ಎಂಬಿಬಿಎಸ್ ವೈದ್ಯರು + 3 ಅಥವಾ 4 ತಜ್ಞರು (ಸ್ತ್ರೀ ರೋಗ ತಜ್ಞರು, ಅರವಳಿಕೆ ತಜ್ಞರು, ಮಕ್ಕಳ ತಜ್ಞರು) ಇರುತ್ತಾರೆ. Block PHC ಯಲ್ಲಿ Major OT ಅಗತ್ಯವಿಲ್ಲದ ಕಾರಣ ನಿರ್ಮಾಣ ವೆಚ್ಚ ಕಡಿಮೆ ಇರುತ್ತದೆ. ಆದ್ದರಿಂದ, ಸದರಿ non FRU CHC (Block PHC) ಮಾದರಿಯನ್ನು ಪರಿಗಣಿಸಿ, ಆಯವ್ಯಯ ಘೋಷಣೆಯ ಬಾಕಿಯಿರುವ 08 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 30 ಹಾಸಿಗೆಗಳ non-FRU CHC (Block PHC) ಗಳನ್ನಾಗಿ ಮೇಲ್ದರ್ಜೆಗೇರಿಸಲು ಪರಿಗಣಿಸಿದಾಗ, ಅಸ್ತಿತ್ವದಲ್ಲಿರುವ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವನ್ನು ಗಣನೆಗೆ ತೆಗೆದುಕೊಂಡು ಕಟ್ಟಡ ಕಾಮಗಾರಿಗೆ ಅಂದಾಜು ಮೊತ್ತ ರೂ.575.00 ಲಕ್ಷಗಳಿಗೆ ಸೀಮಿತದಲ್ಲಿ, Minor OT, Labour room, preparation, scrub and sterile, 4-bed ward for women & 2 bed ward for Men, Office, Triage room, wellness centre, OPD consultation, BHE/LHV room, Injection Room, Dressing, Laboratory, Dispensary/Store, Toilet for male & female and 24 bed ward, staff room, ramp, staircase, Mortuary block, fire fighting, Medical gas pipeline, ವಿದ್ಯುದೀಕರಣ ಮತ್ತು ಉಪಕರಣಗಳನ್ನು ಒಳಗೊಂಡಿರುತ್ತದೆ. ಸದರಿ ಕಟ್ಟಡ ಕಾಮಗಾರಿಯನ್ನು 15ನೇ ಹಣಕಾಸು ಆಯೋಗದ ಅನುದಾನದಡಿ ನಿಗದಿಪಡಿಸಿರುವ ಪ್ರತಿ ಘಟಕದ ವೆಚ್ಚದ ಮಿತಿಯೊಳಗೆ ಕೈಗೊಳ್ಳಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ: -

**ಸರ್ಕಾರದ ಆದೇಶ ಸಂಖ್ಯೆ: ಆಕುಕ 217 ಸಿಜಿಎಂ 2025 ಬೆಂಗಳೂರು, ದಿನಾಂಕ: 08.7.2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2025-26ನೇ ಸಾಲಿನ ಆಯವ್ಯಯ ಕಂಡಿಕೆ 138 (ii) ರಲ್ಲಿ 'ಹೊಸದಾಗಿ ಘೋಷಿಸಲಾಗಿರುವ ತಾಲ್ಲೂಕುಗಳಾದ ಅಳ್ನಾವರ, ಅಣ್ಣಿಗೇರಿ, ಹನೂರು, ಬಬಲೇಶ್ವರ, ತಿಕೋಟ, ಚೇಳೂರು, ತೇರದಾಳ ಮತ್ತು ಹುಡುಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು non-FRU CHC (Non-First Referral Unit Community Health Centre) ಅಥವಾ Block PHC ಗಳನ್ನಾಗಿ ಮೇಲ್ದರ್ಜೆಗೇರಿಸಿ, ಪ್ರತಿ ಕಾಮಗಾರಿಗೆ ರೂ. 575.00 ಲಕ್ಷಗಳ ಮಿತಿಗೊಳಪಟ್ಟು ಒಟ್ಟಾರೆ ರೂ.46.00( ನಲವತ್ತಾರು ಕೋಟಿ ರೂಪಾಯಿಗಳು ಮಾತ್ರ) ಕೋಟಿಗಳನ್ನು 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಭರಿಸಿ ಕ್ರಮಕೈಗೊಳ್ಳಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಷರತ್ತುಗಳು:-

1. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು non-FRU CHC (Non-First Referral Unit Community Health Centre) ಅಥವಾ Block PHC ಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಯನ್ನು ಪಡೆಯತಕ್ಕದ್ದು.
2. ಮೇಲ್ದರ್ಜೆಗೇರಿಸುವ ಪ್ರತಿ ಕಟ್ಟಡ ಕಾಮಗಾರಿಗಳ ವಿವರವಾದ ಅಂದಾಜು ಪಟ್ಟಿಗಳೊಂದಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
3. ಈ ಕಾಮಗಾರಿಗಳನ್ನು ಕೆಟಿಪಿಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸತಕ್ಕದ್ದು.
4. ಈ non-FRU CHC (Non-First Referral Unit Community Health Centre) ಅಥವಾ Block PHC ಗಳ ಕಟ್ಟಡ ಕಾಮಗಾರಿ ಮತ್ತು ಮೂಲಭೂತ ಸೌಕರ್ಯಗಳಿಗೆ 15 ನೇ ಹಣಕಾಸು ಆಯೋಗದಡಿ ಅನುದಾನ ಭರಿಸತಕ್ಕದ್ದು.
5. ಈ non-FRU CHC (Non-First Referral Unit Community Health Centre) ಅಥವಾ Block PHC ಗಳಿಗೆ ಅವಶ್ಯವಿರುವ ಹುದ್ದೆಗಳ ಸೃಜನೆ ಸಂಬಂಧ ಹಾಗೂ ಇದಕ್ಕಾಗಿ ತಗಲುವ ವೆಚ್ಚ ರೂ.21.34 ಕೋಟಿಗಳನ್ನು ರಾಜ್ಯ ಸರ್ಕಾರದಿಂದ ಭರಿಸಲು ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 294 ವೆಚ್ಚ-5/2025, ದಿನಾಂಕ: 17.6.2025 ಮತ್ತು ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ.481/2025 ದಿನಾಂಕ: 02.7.2025 ರಲ್ಲಿನ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
08/7/2025
(ಪ್ರಭು. ವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಆರೋಗ್ಯ- 1 &2).

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) / ಮಹಾಲೇಖಪಾಲರು (ಲೆಕ್ಕ ಮತ್ತು ಪರಿಶೋಧನೆ), ಹೊಸ ಕಟ್ಟಡ, "ಆಡಿಟ್ ಭವನ್", ಅಂಚೆ ಪೆಟ್ಟಿಗೆ ಸಂ: 5398, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
5. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಆರೋಗ್ಯ ಸೌಧ, ಬೆಂಗಳೂರು.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
8. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಕೆ.ಪಿ.ಎಸ್.ಸಿ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು.
9. ಮುಖ್ಯ ಲೆಕ್ಕಪತ್ರಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
10. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ (ವಿಷಯ ಸಂ: ಸಿ:481/2025, ದಿನಾಂಕ: 2.7.2025).
11. ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು (ಆಯುಕ್ತಾಲಯದ ಮುಖಾಂತರ).
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4&5), ವಿಧಾನ ಸೌಧ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿ-2 ರವರ ಆಪ್ತ ಶಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.



ile No. HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)
NAGARAJ R, HFW-JS2(NAG), JOINT SECRETARY 2, HEALTH AND FAMILY WELFARE SEC on 21/03/2026 04:35 PM

. ...36162/2024

ಅನು ೨೦೭ - ೩

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು 15 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿ ಅಗತ್ಯ ಉಪಕರಣಗಳು ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ: 1.2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 109 ರಲ್ಲಿನ ಘೋಷಣೆ

2. ಆಯುಕ್ತರು, ಆಕುಕ ಸೇವೆಗಳು ಇವರಿಂದ ಸ್ವೀಕೃತವಾದ ಏಕ ಕಡತ ಸಂಖ್ಯೆ HFWS-41.49/2023-DD P-HEALTH AND FAMILY WELFARE SERVICES - 1156426

3. ಆರ್ಥಿಕ ಇಲಾಖೆ ಹಿಂಬರಹ ಸಂಖ್ಯೆ:ಆಇ 306 ವೆಚ್ಚ -5/2023, ದಿ:29.01.2024 ಮತ್ತು 13.06.2024 ಹಾಗೂ PDS-HDD/34/2023, ದಿ:02.09.2023.

4.ಸಚಿವ ಸಂಪುಟದ ನಿರ್ಣಯ ಸಂಖ್ಯೆ ಸಿ: 338/2024 ದಿನಾಂಕ:04.07.2024

.......

ಪ್ರಸ್ತಾವನೆ:

2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 109 ರಲ್ಲಿ "ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಈಗಾಗಲೇ 23 PHC ಗಳನ್ನು CHC ಗಳಾಗಿ ಮೇಲ್ದರ್ಜೆಗೇರಿಸಲಾಗಿದೆ. ಈ CHC ಗಳನ್ನು ಕಾರ್ಯಗತಗೊಳಿಸಲು ಬೇಕಿರುವ ಅಗತ್ಯ ಉಪಕರಣಗಳು ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸಲು 70 ಕೋಟಿ ರೂ ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿದೆ"

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರಿಂದ ಸ್ವೀಕೃತವಾದ ಏಕಕಡತದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ 2017-18ನೇ ಸಾಲಿನಲ್ಲಿ 22 ಹಾಗೂ 2020-21ನೇ 2 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳನ್ನು ಸಮುದಾಯ ಆರೋಗ್ಯ ಕೇಂದ್ರ ಕಟ್ಟಡಗಳಾಗಿ ಮೇಲ್ದರ್ಜೆಗೇರಿಸಲು ಅನುಮೋದನೆಗೊಂಡಿದ್ದು, ಮಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರದ ಜಾಗವು ತಕರಾರಿನಲ್ಲಿದ್ದು, ಉಳಿದ 23 ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಆದ್ದರಿಂದ 23 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಿ, ಅಗತ್ಯ ಹುದ್ದೆ ಮಂಜೂರು ಮಾಡುವಂತೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆರಿಸಿದ ನಂತರ ಕ್ಷೇತ್ರ ಸಿಬ್ಬಂದಿಗಳನ್ನು ಬೇರೆ ಪ್ರಾಥಮಿಕ ಆರೋಗ್ಯ ಮತ್ತು ಉಪ ಕೇಂದ್ರಗಳಿಗೆ ಲೆಕ್ಕ ಶೀರ್ಷಿಕೆ ಸಮೇತ ಸ್ಥಳಾಂತರಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ(3)ರಲ್ಲಿ ಆರ್ಥಿಕ ಇಲಾಖೆಯ ಹಿಂಬರಹದಲ್ಲಿ ಆರ್ಥಿಕ ಇಲಾಖೆಯ ಪೂರ್ವಾನುಮತಿಯಿಲ್ಲದೇ, NHM ಅಡಿಯಲ್ಲಿ ಹೊಸದಾಗಿ ಯಾವುದೇ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ /ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲ ಎಂಬ ಷರತ್ತಿಗೊಳಪಟ್ಟು ಒಂದು ಬಾರಿಗೆ ಮಾತ್ರ ಮಾನದಂಡಗಳನ್ನು ಪೂರೈಸಿರುವ 15 ಪ್ರಾಥಮಿಕ

ಆರೋಗ್ಯ ಕೇಂದ್ರಗಳನ್ನು ಅಗತ್ಯ 158 ಹುದ್ದೆಗಳ ಸೃಜನೆಯೊಂದಿಗೆ ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲು ಹಾಗೂ ಹೆಚ್ಚುವರಿ 217 ಹುದ್ದೆಗಳನ್ನು ಸ್ಥಳಾಂತರಿಸಲು ಸಹಮತಿ ನೀಡಲಾಗಿದೆ ಹಾಗೂ ಪ್ರಸ್ತಾವನೆಗೆ ಯೋಜನಾ ಇಲಾಖೆ ಸಹಮತಿ ನೀಡಲಾಗಿದೆ.

ಮೇಲೆ ಓದಲಾದ (4)ರ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾದಲ್ಲಿ ಕಟ್ಟಡ ನಿರ್ಮಾಣ ಮಾಡಲಾದ 15 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅಗತ್ಯವಿರುವ ವಿವಿಧ ವೃಂದದ 158 ಹುದ್ದೆಗಳ ಸೃಜನೆಯೊಂದಿಗೆ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಹಾಗೂ ಹೆಚ್ಚುವರಿ 217 ಹುದ್ದೆಗಳನ್ನು ಸ್ಥಳಾಂತರಿಸಲು ಅನುಮೋದನೆ ನೀಡಲಾಗಿದೆ. ಆದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 201 ಸಿಜಿಎಂ 2022.**
**ಬೆಂಗಳೂರು, ದಿನಾಂಕ:09 .07.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾದ ಅನುದಾನದಲ್ಲಿ ಕಟ್ಟಡ ನಿರ್ಮಾಣ ಮಾಡಲಾದ ಅನುಬಂಧ -1 ರಲ್ಲಿ ತಿಳಿಸಿರುವ 15 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿ ಹಾಗೂ ಇವುಗಳಿಗೆ ಅಗತ್ಯವಿರುವ ವಿವಿಧ ವೃಂದದ ಒಟ್ಟು 158 ಹುದ್ದೆಗಳನ್ನು ಸೃಜಿಸಲು ಮತ್ತು ಅನುಬಂಧ-2 ರಲ್ಲಿನ 217 ಹುದ್ದೆಗಳನ್ನು ಕಡಿಮೆ ಒತ್ತಡ ಇರುವ ಸ್ಥಳಗಳಿಂದ ಅವಶ್ಯವಿರುವ ಕೇಂದ್ರಗಳಿಗೆ ಸ್ಥಳಾಂತರಿಸಿಕೊಳ್ಳಲು ಅನುಮೋದನೆ ನೀಡಲಾಗಿದೆ.

ಇನ್ನು ಮುಂದೆ ಸರ್ಕಾರದ ಪೂರ್ವಾನುಮತಿಯಿಲ್ಲದೇ, NHM ಅಡಿಯಲ್ಲಿ ಹೊಸದಾಗಿ ಯಾವುದೇ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ /ನಿರ್ಮಾಣ ಕಾರ್ಯಗಳನ್ನು ಕೈಗೊಂಡಲ್ಲಿ ಆರ್ಥಿಕ ಇಲಾಖೆಯು ಯಾವುದೇ ಅನುದಾನ ಒದಗಿಸುವುದಿಲ್ಲ ಹಾಗೂ ಸಂಬಂಧಪಟ್ಟ ಅಧಿಕಾರಿಗಳೇ ಇದಕ್ಕೆ ಜವಾಬ್ದಾರರಾಗಿರುತ್ತಾರೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಹಿಂಬರಹ ಸಂಖ್ಯೆ:ಆಇ 306 ವೆಚ್ಚ -5/2023, ದಿ:29.01.2024 ಮತ್ತು 13.06.2024, ಯೋಜನಾ ಇಲಾಖೆಯ ಹಿಂಬರಹ ಸಂಖ್ಯೆ PDS-HDD/34/2023, ದಿ:02.09.2023 ಮತ್ತು ಸಚಿವ ಸಂಪುಟ ನಿರ್ಣಯದ ಸಂಖ್ಯೆ ಸಿ:338/2024, ದಿನಾಂಕ:04.07.2024 ರಲ್ಲಿ ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

09/7/2024
(ಪದ್ಮ ವಿ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ 1 & 2)

10/7/24

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ. & ಎಸ್ ಎಸ್ ಎ) / (ಇ ಆರ್ ಎಸ್.ಎ) ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ5398, ಬೆಂಗಳೂರು-560 001.

2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ:5329, ಬೆಂಗಳೂರು-560 001.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
5. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
6. ನಿರ್ದೇಶಕರು, ಯೋಜನಾ ಇಲಾಖೆ (ಜನಶಕ್ತಿ ಮತ್ತು ಉದ್ಯೋಗ ವಿಭಾಗ), ಬಹುಮಹಡಿ ಕಟ್ಟಡ, ಬೆಂಗಳೂರು.
7. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ವಿ.ವಿ ಗೋಪುರ, ಬೆಂಗಳೂರು-01.
8. ಮುಖ್ಯ ಹಣಕಾಸು ಅಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು
9. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ ( ನಿರ್ಣಯ ಸಂಖ್ಯೆ: ಸಿ:338/2024, ದಿನಾಂಕ:04.07.2024)
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4&5), ವಿಧಾನ ಸೌಧ, ಬೆಂಗಳೂರು
11. ಕಾಯ್ದಿರಿಸಿದ ಕಡತ/ಹೆಚ್ಚುವರಿ ಪ್ರತಿ

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಕುಕ ಇಲಾಖೆರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು
3. ಸರ್ಕಾರದ ಜಂಟಿ ಕಾರ್ಯದರ್ಶಿ-2, ಆಕುಕ ಇಲಾಖೆ, ವಿಕಾಸ ಸೌಧ, ಬೆಂಗಳೂರು

ಅನುಬಂಧ - 3

[redacted]

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಯ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿ ಕಟ್ಟಡ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. 2022-23ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 88(ಅ)
2. ಮುಖ್ಯ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ HFWS-CEW/20/2023

ಪ್ರಸ್ತಾವನೆ:

2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 88ರಲ್ಲಿ ಹೆಚ್ಚಿನ ಕಾರ್ಯ ಒತ್ತಡವಿರುವ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 25 ಹಾಸಿಗೆಯ ಮಾದರಿ ಸಮುದಾಯ ಆರೋಗ್ಯ ಕೇಂದ್ರಗಳಾಗಿ 2 ವರ್ಷಗಳ ಅವಧಿಯಲ್ಲಿ ರೂ.1000.00 ಕೋಟಿ ವೆಚ್ಚದಲ್ಲಿ ಉನ್ನತೀಕರಿಸಲಾಗುವುದು ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ(2) ರ ಏಕಕಡತದ ಪ್ರಸ್ತಾವನೆಯಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಪಟ್ಟಣದಲ್ಲಿ ಪ್ರಸ್ತುತ ಸುಮಾರು 30 ರಿಂದ 35 ವರ್ಷಗಳ ಹಿಂದೆ ನಿರ್ಮಿಸಿರುವ 6 ಹಾಸಿಗೆಗಳ ಸಾಮರ್ಥ್ಯದ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು, ಸದರಿ ಪಟ್ಟಣವು ತುಮಕೂರು ಜಿಲ್ಲೆಯ 2ನೇ ಅತೀ ದೊಡ್ಡ ಹೋಬಳಿ ಕೇಂದ್ರವಾಗಿದ್ದು, 2 ರಾಷ್ಟ್ರೀಯ ಹೆದ್ದಾರಿ ಹಾಗೂ 1 ರಾಜ್ಯ ಹೆದ್ದಾರಿ ಇಲ್ಲಿ ಹಾದು ಹೋಗುತ್ತಿದ್ದು, ಪ್ರಸ್ತುತ ದಿನಗಳಲ್ಲಿ ಸದರಿ ಆಸ್ಪತ್ರೆಯ ಒಳರೋಗಿಗಳ ಸಂಖ್ಯೆ ಹಾಗೂ ಹೆರಿಗೆ ಪ್ರಕರಣಗಳು ಅಧಿಕವಾಗಿದ್ದು, ಸದರಿ ರೋಗಿಗಳ ಸಮರ್ಪಕ ಚಿಕಿತ್ಸೆ ನಿರ್ವಹಣೆಗಾಗಿ ಹಾಲಿ ಇರುವ 6 ಹಾಸಿಗೆಗಳ ಸಾಮರ್ಥ್ಯದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ಸ್ಥಳೀಯ ಶಾಸಕರು ಹಾಗೂ ಕಾನೂನು ಸಚಿವರು ಮೌಖಿಕವಾಗಿ ಸೂಚಿಸಿರುತ್ತಾರೆ ಎಂದು ತಿಳಿಸುತ್ತಾ, ಹುಳಿಯಾರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ರೂ 999.00 ಲಕ್ಷಗಳ ಅಂದಾಜು ಪಟ್ಟಿಗೆ (ಈ ಮೊತ್ತದಲ್ಲಿ ಟೆಂಡರ್ ಪ್ರೀಮಿಯಂ ಮತ್ತು ಪತ್ರಿಕಾ ಪ್ರಕಟಣೆ ಅಂಶಗಳು ಸೇರ್ಪಡೆಯಾಗದೇ ಇದ್ದು, ಈ ಅಂಶಗಳನ್ನು ಟೆಂಡರ್ ಅನುಮೋದನೆಯ ನಂತರ ಕಾಮಗಾರಿಯ ವಾಸ್ತವ ಪಾವತಿಗನುಗುಣವಾಗಿ ಪಾವತಿಸಬೇಕಾಗಿರುತ್ತದೆ) ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಕಲ್ಪಿಸುವಂತೆ ಪ್ರಸ್ತಾಪಿಸಿರುತ್ತಾರೆ.

ಕಾಮಗಾರಿಯ ವಿವರಗಳು

| Sl. No | Building Details | Planned | Estimated Cost (Rs. In Lakhs) |
|---|---|---|---|
| 1 | Hospital Block | Ground Floor + First Floor (Built up area - 2600 Sqm), Mortuary Block (Built up area 72.00 Sqm) and other allied facilities, Water supply, Fire fighting MGPLS, Electrical etc., | 749.85 |
| 2 | Furniture | | 90.00 |
| 3 | GST at 18% | | 152.00 |
| 4 | PMC charges | | 5.08 |
| 5 | Miscellaneous and Rounding off | | 2.07 |



e No. HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)
...d from Office ... NAGARAJ ... HFW ... JOINT SECRETARY ... HEALTH AND FAMILY WELFARE SEC ...

| Total | 999.00 |
|---|---|

ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 317 ಸಿಜಿಎಂ 2021,**

**ಬೆಂಗಳೂರು, ದಿನಾಂಕ: 10-03-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಮಾದರಿ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿ, ಪ್ರಸ್ತಾಪಿತ ಹೊಸ ಕಟ್ಟಡ ಕಾಮಗಾರಿಯ ರೂ 909.00 ಲಕ್ಷಗಳ (ಒಂಬೈನೂರ ಒಂಬತ್ತು ಲಕ್ಷ ರೂಪಾಯಿಗಳು) ಅಂದಾಜು ಪಟ್ಟಿಗೆ (ಪೀಠೋಪಕರಣಗಳ ರೂ 90.00 ಲಕ್ಷಗಳನ್ನು ಹೊರತುಪಡಿಸಿ) ಯೋಜನಾ ಇಲಾಖೆಯ ಸಹಮತಿಯನ್ನು ಬಾಕಿಯಿರಿಸಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

1. ಸದರಿ ಕಟ್ಟಡ ಕಾಮಗಾರಿಯ ವೆಚ್ಚವನ್ನು ಲೆಕ್ಕಶೀರ್ಷಿಕೆ 4210-01-110-1-01-133 (SDP) ರಡಿ ಕೈಗೊಳ್ಳತಕ್ಕದ್ದು.
2. ಸದರಿ ಕಾಮಗಾರಿಗೆ ತಾಂತ್ರಿಕ ಅನುಮೋದನೆ ಪಡೆದು ಹಾಗೂ ಕೆ.ಟಿ.ಪಿ.ಪಿ ಕಾಯ್ದೆ ಹಾಗೂ ನಿಯಮಗಳನ್ವಯ ಟೆಂಡರ್ ಆಹ್ವಾನಿಸಿ ಕ್ರಮ ಕೈಗೊಳ್ಳತಕ್ಕದ್ದು.
3. ಸದರಿ ಕಟ್ಟಡ ಕಾಮಗಾರಿ ಮುಕ್ತಾಯದ ಹಂತದಲ್ಲಿರುವಾಗ ಹುದ್ದೆ ಸೃಜನೆ ಬಗ್ಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 454 ವೆಚ್ಚ-5/2020, ದಿನಾಂಕ:06.03.2023 ಮತ್ತು ಆಇ 01 ಟಿಎಫ್‌ಪಿ 2022, ದಿನಾಂಕ 03.01.2023ರಲ್ಲಿ ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಸಹಿ) 13/3/2023
(ಪದ್ಮ.ವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ 1 ಮತ್ತು 2)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ) / (ಇ&ಆರ್ ಎಸ್‌ಎ), ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ-5398, ಬೆಂಗಳೂರು-01
2. ಪ್ರಧಾನ ಮಹಾಲೇಖಪಾಲರು (ಎ&ಇ), ಪಾರ್ಕ್ ಹೌಸ್ ರಸ್ತೆ, ಅಂಚೆಪೆಟ್ಟಿಗೆ-5329, ಬೆಂಗಳೂರು-01.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಭವನ, ಮಾಗಡಿ ರಸ್ತೆ, ಬೆಂಗಳೂರು
4. ಅಭಿಯಾನ ನಿರ್ದೇಶಕರು, ಆರೋಗ್ಯ ಭವನ, ಮಾಗಡಿ ರಸ್ತೆ, ಬೆಂಗಳೂರು
5. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು-01.
6. ನಿರ್ದೇಶಕರು, ಯೋಜನಾ ಇಲಾಖೆ (ಜನಶಕ್ತಿ ಮತ್ತು ಉದ್ಯೋಗ ವಿಭಾಗ), ಬಹುಮಹಡಿ ಕಟ್ಟಡ, ಬೆಂಗಳೂರು.
7. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸಮನ್ವಯ ಶಾಖೆ).
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.



File No. HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)
... JOINT SECRETARY 2, HEALTH AND FAMILY WELFARE SEC on 21/03/2026 04:35 PM

ಆಉ 2008 3

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೈಸೂರು ಜಿಲ್ಲೆ & ತಾಲ್ಲೂಕು ಸಿದ್ಧರಾಮನಹುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಹಾಗೂ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡುವುದರೊಂದಿಗೆ ಕಟ್ಟಡ ಕಾಮಗಾರಿಯನ್ನು ರೂ.1300.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ ಆಕುಕ 345 ಸಿಜಿಎಂ 2023 (ಭಾಗ-1), ದಿನಾಂಕ: 19.12.2023.
2. ಮುಖ್ಯ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ ಇವರ ಪತ್ರ ಸಂಖ್ಯೆ ಆಕುಕ/ಇಂಘ/ಮುಇಂ/ತಾಂಸ-1/ಸಇಂ-4/ಸಿದ್ಧರಾಮನ ಹುಂಡಿ -ಮೈಸೂರು/2023-24/2064, ದಿನಾಂಕ: 04.1.2023.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ಇವರ ಏಕ ಕಡತ ಸಂಖ್ಯೆ HFWS-HP012/1/2024-O/oJD(HP) (1330209).
4. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ ಆಇ 122 ವೆಚ್ಚ-5/2024, ದಿನಾಂಕ: 04.3.2024.
5. ಸಚಿವ ಸಂಪುಟದ ಪ್ರಕರಣ ಸಂಖ್ಯೆ ಸಿ.262/2024 ದಿನಾಂಕ: 14.3.2024.

*****

ಪ್ರಸ್ತಾವನೆ:-

ಮೇಲೆ ಓದಲಾದ (1) ರ ಆದೇಶದಲ್ಲಿ, 2023-24ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಲೆಕ್ಕ ಶೀರ್ಷಿಕೆ: 4210-01-110-1-01-133 (ವಿಶೇಷ ಅಭಿವೃದ್ಧಿ ಯೋಜನೆ) ರಡಿ ನಿಗಧಿಪಡಿಸಿರುವ ಅನುದಾನದಲ್ಲಿ ಮುಂದುವರೆದ ಮತ್ತು ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಈ ಕ್ರಿಯಾ ಯೋಜನೆಯ ಹೊಸ ಕಾಮಗಾರಿಗಳ ಪಟ್ಟಿಯಲ್ಲಿ ಮೈಸೂರು ಜಿಲ್ಲೆ & ತಾಲ್ಲೂಕು ಸಿದ್ಧರಾಮನ ಹುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ರೂ.1300.00ಲಕ್ಷಗಳ ಕಾಮಗಾರಿಯನ್ನು ಸೇರಿಸಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2) ರ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ, 2023-24ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಲೆಕ್ಕ ಶೀರ್ಷಿಕೆ:4210-01-110-1-01-133 (ವಿಶೇಷ ಅಭಿವೃದ್ಧಿ ಯೋಜನೆ) ರ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿರುವಂತೆ, ಕಾರ್ಯಪಾಲಕ ಅಭಿಯಂತರರು, ಮೈಸೂರು ವಿಭಾಗ ರವರು ವಿವರವಾದ ಅಂದಾಜು ಪಟ್ಟಿಯನ್ನು ಚಾಲ್ತಿಯಲ್ಲಿರುವ 2023-24ನೇ ಸಾಲಿನ ಲೋಕೋಪಯೋಗಿ ಇಲಾಖೆ ಏಕರೂಪ ದರ ಪಟ್ಟಿ ಹಾಗೂ 2023-24ನೇ ಸಾಲಿನ ವಿದ್ಯುತ್ ದರಪಟ್ಟಿಯನ್ವಯ ಜಿ.ಎಸ್.ಟಿ (18%) ಸೇರಿದಂತೆ ರೂ.1300.00 ಲಕ್ಷಗಳಿಗೆ ಸಿದ್ಧಪಡಿಸಿ ಈ ಕೆಳಕಂಡಂತೆ ಸಲ್ಲಿಸಿರುವ ಕಾಮಗಾರಿಯ ಕ್ರೋಡೀಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಲಾಗಿದೆ

(Rs in lakhs)

| Sl No. | Building Details | Provisions Made | Estimated Cost |
|---|---|---|---|
| 1 | COMMUNITY HEALTH CENTRE TOTAL BUILT UP AREA-2160.00 SQM, (GROUND+1 UPPER FLOOR) | Civil Works: Ground Floor, Terrace Floor, Internal Water supply and Sanitary Works, Internal Electrification. Other allied Facilitites: Fire Fighting works, Modular OT 1-No. UPS System, Telephone & Networking, CCTV System, MGPLS. | 685.25 |
| 2 | DOCTOR QUARTERS (01 dwelling units in each floor. Total 01 dwelling units in each block) TOTAL BUILTUP AREA 158.80 Sqm (GROUND FLOOR) | Civil Works: Ground Floor, First Floor, Terrace Internal Water supply and Sanitary Works, Internal Electrification. | 57.62 |
| 3 | NURSES QUARTERS (2 Dwelling units in each floor. 02 dwelling in each block) TOTAL BUILTUP AREA = 143.40 sqm (GROUND FLOOR) | Civil Works: Ground Floor, First & Terrace Floor Internal Water supply and Sanitary Works, Internal Electrification. | 49.61 |
| 4 | MORTUARY BLOCK TOTAL BUILTUP AREA = 72.00 Sqm (GROUND FLOOR) | Civil Works: Ground Floor, Internal Water supply and Internal Electrification. | 19.03 |
| 5 | OTHER INFRASTRUCTURE RELATED WORKS | External Electrification & DG Set for Hospital. External Water Supply Hospital & Mortuary Block, Bituminous road, Sump tank, Drain, Bore well 1 No., Septic tank and Soak Pit, Barbed wire Compound Wall, Demolition work Consultancy Charges For Architectural, Structural, & DPR Charges. | 99.76 |

ಪ್ರತಿ ಮಾಹಿತಿಗಾಗಿ:

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ
3. ಸರ್ಕಾರದ ಉಪ ಕಾರ್ಯದರ್ಶಿ-2, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು

| | | |
|---|---|---|
| | Sub Total (A) | 911.27 |
| 6 | Project Monitoring Consultancy Charges | 4.56 |
| 7 | Price Escalation and Tender premium | 91.13 |
| 8 | Medical Equipment Cost | 69.46 |
| 9 | Furniture Works cost | 21.87 |
| 10 | GST at 18% | 197.70 |
| 11 | Statutory Deposits, Electrical Deposit, Publication and unforeseen charges, Miscellaneous etc.. | 4.01 |
| | | |
| | Sub Total (B) | 388.73 |
| | Total (A+B) | 1300.00 |

ಮೇಲೆ ಓದಲಾದ (3) ರ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ರವರ ಪತ್ರದಲ್ಲಿ, 2022ರ ಪರಿಷ್ಕೃತ ಯೋಜಿತ ಜನಸಂಖ್ಯೆ ಪ್ರಕಾರ ಮೈಸೂರು ತಾಲ್ಲೂಕಿನಲ್ಲಿ 3,46,488 ಜನಸಂಖ್ಯೆಯಿದ್ದು, ಇದಕ್ಕನುಗುಣವಾಗಿ 03 ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶವಿರುತ್ತದೆ. ಪ್ರಸ್ತುತ, ಮೈಸೂರು ತಾಲ್ಲೂಕಿನಲ್ಲಿ ಜಯಪುರ ಸಮುದಾಯ ಆರೋಗ್ಯ ಕೇಂದ್ರ ಮತ್ತು ಅಶೋಕಪುರಂ ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, 01 ಸಮುದಾಯ ಆರೋಗ್ಯ ಕೇಂದ್ರ ಸ್ಥಾಪನೆಗೆ ಅವಕಾಶವಿರುತ್ತದೆ. ಪ್ರಸ್ತುತ, ಸಿದ್ಧರಾಮನಹುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ತೀರ್ಮಾನಿಸಲಾಗಿದ್ದು, ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ 22 ಹುದ್ದೆಗಳಲ್ಲಿ 09 ಹುದ್ದೆಗಳನ್ನು ಉಳಿಸಿಕೊಂಡು, ಉಳಿದ 13 ಹುದ್ದೆಗಳನ್ನು ಬೇರೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಬೇಕಾಗಿರುತ್ತದೆ. ನಾರ್ಮ್ಸ್ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿದಲ್ಲಿ, 33 ಹುದ್ದೆಗಳು ಹೊಂದಿರಬೇಕಾಗಿರುತ್ತದೆ. ಆದ್ದರಿಂದ, ಅಗತ್ಯವಿರುವ 24 ಹುದ್ದೆಗಳನ್ನು ಸೃಜಿಸಬೇಕಾಗಿದ್ದು, ಇದಕ್ಕೆ ವಾರ್ಷಿಕ ರೂ.206.19 ಲಕ್ಷಗಳ ಆವರ್ತಕ ವೆಚ್ಚ ಮತ್ತು ಉಪಕರಣ & ಪೀಠೋಪಕರಣಗಳಿಗಾಗಿ ರೂ.45.00 ಲಕ್ಷಗಳು ಅನಾವರ್ತಕ ವೆಚ್ಚ ಅವಶ್ಯಕತೆಯಿರುವುದಾಗಿ ಪ್ರಸ್ತಾಪಿಸಲಾಗಿದೆ. ಆದರೆ, ಕಾರ್ಯಪಾಲಕ ಅಭಿಯಂತರರು, ಮೈಸೂರು ವಿಭಾಗ ರವರು ಚಾಲ್ತಿಯಲ್ಲಿರುವ 2023-24ನೇ ಸಾಲಿನ ಲೋಕೋಪಯೋಗಿ ಇಲಾಖೆ ಏಕರೂಪ ದರ ಪಟ್ಟಿ ಹಾಗೂ 2023-24ನೇ ಸಾಲಿನ ವಿದ್ಯುತ್ ದರಪಟ್ಟಿಯನ್ವಯ ಜಿ.ಎಸ್.ಟಿ (18%) ಸೇರಿದಂತೆ ರೂ.1300.00 ಲಕ್ಷಗಳಿಗೆ ವಿಸ್ತೃತವಾದ ಅಂದಾಜು ಪಟ್ಟಿ ಸಲ್ಲಿಸಿರುವುದನ್ನು ಮುಖ್ಯ ಇಂಜಿನೀಯರ್, ಇಂಜಿನಿಯರಿಂಗ್ ವಿಭಾಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಪರಿಶೀಲಿಸಿ, ಅಂದಾಜು ಪಟ್ಟಿಯಲ್ಲಿ ಪೀಠೋಪಕರಣಗಳಿಗೆ ರೂ.21,87,400.00 ಮತ್ತು ವೈದ್ಯಕೀಯ ಉಪಕರಣಗಳಿಗೆ ರೂ.69,46,300.00 ಗಳನ್ನು ಮೀಸಲಿರಿಸಲಾಗಿದೆ ಎಂದು ವಿವರಿಸಿರುವುದರಿಂದ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಲಾಗಿದೆ. ವಿವರಗಳು ಈ ಕೆಳಗಿನಂತಿವೆ.

**Name of Work:** PROPOSED UP-GRADATION OF PRIMARY HEALTH CENTRE TO COMMUNITY HEALTH CENTRE AT SIDDRAMANAHUNDI AT MYSORE TALUK, MYSORE DISTRICT

ABSTRACT

| Sl No. | Praticulars | Amount |
|---|---|---|
| I | **COMMUNITY HEALTH CENTRE TOTOAL BUILT UP AREA = 2160.00 SQM (GROUND +1 UPPER FLOOR)** | |
| A | **Civil works** | |
| 1 | Ground floor | 2,61,34,105.00 |
| 2 | First floor | 1,80,76,892.00 |
| 3 | Terrace Floor | 34,73,845.00 |
| 4 | Internal Water Supply & sanitary works | 18,30,877.00 |
| 5 | Internal Electrification | 47,00,040.00 |
| | TOTAL (1-5) | 5,42,15,759.00 |
| B | **Other Allied Facilities** | |
| 1 | Fire Fighting Works | 39,07,568.00 |
| 2 | Modular OT (1-No) | 50,50,651.00 |
| 3 | UPS System | 5,13,000.00 |
| 4 | Telephone & Networking | 5,73,018.00 |
| 5 | CCTV System | 6,64,206.00 |
| 6 | Medical Gas Pipeline | 49,49,595.00 |
| | TOTAL (1-6) | 1,56,58,038.00 |
| | TOTAL (A+B) | 6,98,73,797.00 |
| II | **MORTUARY BLOCK TOTAL BUILTUP AREA = 72.00 M2 (GROUND FLOOR)** | |
| 1 | Ground floor | 16,48,854.00 |
| 2 | Internal water supply | 1,18,493.00 |
| 3 | Internal Electrification | 1,12,660.00 |
| | Total (1-3) | 18,80,007.00 |
| III | **DOCTOR QUARTERS (01) dwelling units in each floor. Total 01 dwelling units in each block) TOTAL BUIL TUP AREA= 158.80 sqm (GROUND FLOOR)** | |
| 1 | Ground floor | 32,33,584.00 |
| 2 | Terrace Floor | 6,32,780.00 |
| 3 | Internal Water Supply & sanitary works | 1,69,805.00 |
| 4 | Internal Electrification | 1,94,612.00 |
| | TOTAL (1-4) | 42,30,781.00 |

| | | |
|---|---|---|
| IV | NURSES & GROUP-D QUARTERS (2 Dwelling units in each floor. 02 dwelling in each block) TOTAL BUILTUP AREA = 143.4 sqm (GROUND FLOOR) | |
| 1 | Ground floor | 35,01,511.00 |
| 2 | Terrace Floor | 6,17,295.00 |
| 3 | Internal Water Supply & sanitary works | 2,21,336.00 |
| 4 | Internal Electrification | 2,69,125.00 |
| | TOTAL (1-4) | 46,09,267.00 |
| | | |
| V | OTHER INFRASTRUCTURE RELATED WORKS | |
| 1 | External Electrification for Hospital | 17,40,498.00 |
| 2 | External Electrification for Quarters | 3,18,978.00 |
| 3 | DG set For Hospital | 9,00,518.00 |
| 4 | External Water Supply For Hospital | 8,63,774.00 |
| 5 | External Water Supply For Mortuary Block | 90,085.00 |
| 6 | Bituminous Road | 12,20,194.00 |
| 7 | Sump Tank | 3,45,634.00 |
| 8 | Drain | 6,69,520.00 |
| 9 | Borewell 1-No | 5,22,574.00 |
| 10 | Septic tank and soak Pit | 4,16,104.00 |
| 11 | Barbed wire Compound Wall | 3,41,041.00 |
| 12 | Renovation of Existing PHC Building (Civil Work) | 8,62,923.00 |
| 13 | Demolition Work | 9,05,364.00 |
| 14 | Consultancy Charges for Architectural, Structural, & DPR Charges | 13,46,866.00 |
| | TOTAL (1-14) | 1,05,44,073.00 |
| | TOTAL I+II+III+IV+V | 9,11,37,925.00 |
| VI | | |
| VII | Project Monitoring Consultancy Charges @ 0.5% on Sl.no IV | 4,55,690.00 |
| VIII | 10% Price Escalation and Tender premium on items Sl No. VI | 91,13,793.00 |
| IX | Medical Equipment's Cost | 69,46,300.00 |
| X | Furniture Works Cost | 21,87,400.00 |
| XI | ADD 18% GST on items Sl No. VI+VII+VIII+IX+X | 1,97,71,399.00 |
| XII | Statutory Deposits | |
| 1 | Electrical Deposits For Hospital | 3,52,049.00 |
| | TOTAL | 3,52,049.00 |
| | | |
| XIII | Miscellaneous and Rounding off | 35,444.00 |
| | Total Cost Of The Project (VI+VII+VIII+IX+X+XI+XII+XIII) | 13,00,00,000.00 |

ಮೇಲೆ ಓದಲಾದ (4)ರಲ್ಲಿ ಆರ್ಥಿಕ ಇಲಾಖೆಯು "ಪ್ರಸ್ತಾವಿತ ಲೆಕ್ಕ ಶೀರ್ಷಿಕೆಯಡಿ ಪ್ರಸಕ್ತ ಸಾಲಿನಲ್ಲಿ ಉಳಿತಾಯವಾದಲ್ಲಿ ಅಥವಾ 2024-25ನೇ ಸಾಲಿನ ಆಯವ್ಯಯದಲ್ಲಿನ ಅನುದಾನದಿಂದ ಪ್ರಸ್ತಾವಿತ ಕಾಮಗಾರಿಯನ್ನು ಕೈಗೊಳ್ಳುವಂತೆ ತಿಳಿಸಿ" ಸಹಮತಿಸಿರುತ್ತದೆ. ಇದರನ್ವಯ ಪರಿಶೀಲಿಸಲಾಗಿ, 2023-24ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಲೆಕ್ಕ ಶೀರ್ಷಿಕೆ:4210-01-110-1-01-133 (SDP) ರ ಕ್ರಿಯಾ ಯೋಜನೆಯಲ್ಲಿ ಈ ಕಾಮಗಾರಿಯು ಸೇರ್ಪಡೆಯಾಗಿದ್ದು, ಪ್ರಸಕ್ತ ಸಾಲಿಗೆ ರೂ.650.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿಕೊಂಡಿರುವುದರಿಂದ, ಪ್ರಸಕ್ತ ಸಾಲಿನಲ್ಲಿಯೇ ಈ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರವು ಉದ್ದೇಶಿಸಿರುತ್ತದೆ. ಆದ್ದರಿಂದ, ಈ ಕೆಳಕಂಡಂತೆ ಆದೇಶ:-

<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 43 ಸಿಜಿಎಂ 2024 ಬೆಂಗಳೂರು, ದಿನಾಂಕ: 16.3.2024.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮೈಸೂರು ಜಿಲ್ಲೆ & ತಾಲ್ಲೂಕು ಸಿದ್ದರಾಮನಹುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿ, ಕಟ್ಟಡ ಕಾಮಗಾರಿಯನ್ನು ರೂ.1300.00 ಲಕ್ಷಗಳ (ಒಂದು ಸಾವಿರದ ಮುನ್ನೂರು ಲಕ್ಷ ರೂಪಾಯಿಗಳು ಮಾತ್ರ) ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಷರತ್ತುಗಳು:-

1. ಈ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಯನ್ನು ಪಡೆಯತಕ್ಕದ್ದು
2. ಈ ಕಾಮಗಾರಿಗಳನ್ನು ಕೆಟಿಪಿಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸತಕ್ಕದ್ದು
3. ಮಾನವ ಸಂಪನ್ಮೂಲಕ್ಕಾಗಿ ಅವಶ್ಯವಿರುವ ಹುದ್ದೆಗಳ ಸೃಜಿಸುವ ಸಂಬಂಧ ಶೇ.80% ರಷ್ಟು ಕಾಮಗಾರಿ ಪೂರ್ಣಗೊಂಡ ನಂತರ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 122 ವೆಚ್ಚ-5/2024, ದಿನಾಂಕ:04.3.2024 ಮತ್ತು ಸಚಿವ ಸಂಪುಟದ ನಿರ್ಣಯ ಸಂಖ್ಯೆ: ಸಿ:262/2024, ದಿನಾಂಕ:14.3.2024 ರ ಅನುಮೋದನೆಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮ. ವಿ) 16/3/2024
ಸರ್ಕಾರದ ಅಧೀನ ಕಾರ್ಯದರ್ಶಿ,
Padma. V
Under Secretary to Government
Health & Family Welfare Department

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಆರೋಗ್ಯ- I &2).

ಇವರಿಗೆ : -

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) / ಮಹಾಲೇಖಪಾಲರು (ಲೆಕ್ಕ ಮತ್ತು ಪರಿಶೋಧನೆ), ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
4. ಮುಖ್ಯ ಇಂಜಿನೀಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನೀಯರಿಂಗ್ ಘಟಕ, ಆರೋಗ್ಯ ಸೌಧ, ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
6. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಕೆ.ಪಿ.ಸಿ.ಎಲ್ ಕಚೇರಿ, ಅರಮನೆ ರಸ್ತೆ, ಬೆಂಗಳೂರು.
7. ಮುಖ್ಯ ಹಣಕಾಸು ಅಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
8. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ (ವಿಷಯ ಸಂ: ಸಿ:262/2024, ದಿನಾಂಕ:14.3.2024).
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4&5), ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
11. ಸರ್ಕಾರದ ಜಂಟಿ ಕಾರ್ಯದರ್ಶಿ-2 ರವರ ಆಪ್ತ ಶಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

(ಪ್ರ) ಬಿಎಂ-೦೯, ೬೬

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಾಮರಾಜನಗರ ಜಿಲ್ಲೆ ವ್ಯಾಪ್ತಿಯಲ್ಲಿ ಹೊಸದಾಗಿ ವಿವಿಧ ಆರೋಗ್ಯ ಸಂಸ್ಥೆಗಳನ್ನು ಮಂಜೂರು ಮಾಡಲು ಮತ್ತು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಲು ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ: -

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತಾಲಯದ ಏಕ ಕಡತ ಸಂಖ್ಯೆ HFWS-CEW0FILE/20/2025 (1684165)
2. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ ಆಇ 68 ವೆಚ್ಚ-5/2025, ದಿನಾಂಕ 13.3.2025 ಮತ್ತು ದಿನಾಂಕ: 21.4.2025.
3. ಸಚಿವ ಸಂಪುಟದ ಪ್ರಕರಣ ಸಂಖ್ಯೆ ಸಿ.266/2025 ದಿನಾಂಕ: 24.4.2025.

*****

ಪ್ರಸ್ತಾವನೆ: -

ಮೇಲೆ ಓದಲಾದ (1) ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಏಕ ಕಡತದಲ್ಲಿ, ಚಾಮರಾಜನಗರ ಜಿಲ್ಲೆ ಗುಡ್ಡಗಾಡು ಮತ್ತು ಅರಣ್ಯ ಪ್ರದೇಶವಾಗಿದ್ದು, ಸೋಲಿಗ ಬುಡಕಟ್ಟು ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಪೋಡುಗಳಲ್ಲಿ ವಾಸಿಸುತ್ತಿದ್ದಾರೆ. ಈ ಪ್ರದೇಶಗಳಿಗೆ ಸೂಕ್ತ ಸಂಪರ್ಕ ಸಾರಿಗೆ ಕೊರತೆ ಇರುತ್ತದೆ. ಇಲ್ಲಿನ ಜನರಿಗೆ ಸೂಕ್ತ ವೈದ್ಯಕೀಯ ಸೌಲಭ್ಯ, ರಸ್ತೆ ಅಪಘಾತ ಮತ್ತು ಅರಣ್ಯ ಪ್ರದೇಶದಲ್ಲಿ ಹರಡಬಹುದಾದ ಖಾಯಿಲೆಗಳ ಚಿಕಿತ್ಸೆಗಾಗಿ ಆರೋಗ್ಯ ಸೇವೆಯನ್ನು ಸಮರ್ಪಕವಾಗಿ ಒದಗಿಸಲು ಆಸ್ಪತ್ರೆಗಳು ದೂರದಲ್ಲಿದ್ದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತೆರಳಲು ಹೆಚ್ಚಿನ ಸಮಯವಕಾಶ ಬೇಕಾಗಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಸೂಕ್ತ ಸಮಯಕ್ಕೆ ಸರಿಯಾಗಿ ಆರೋಗ್ಯ ಸೌಲಭ್ಯ ದೊರಕಿಸಲು ಸಾಧ್ಯವಾಗಿರುವುದಿಲ್ಲ. ಅಲ್ಲದೆ, ಚಾಮರಾಜನಗರ ಜಿಲ್ಲೆಯು ಮಲೆಮಹದೇಶ್ವರ ಬೆಟ್ಟ ಮತ್ತು ಗೋಪಾಲಸ್ವಾಮಿ ಬೆಟ್ಟದ ದೇವಸ್ಥಾನಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುವುದರಿಂದ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಹೊಸದಾಗಿ ವಿವಿಧ ಆರೋಗ್ಯ ಸಂಸ್ಥೆಗಳನ್ನು ಮಂಜೂರು ಮಾಡಲು ಮತ್ತು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿರುತ್ತದೆ.

IPHS-2022 ನಾರ್ಮ್ಸ್ ಪ್ರಕಾರ (1 bed/ 1000 population) ಮತ್ತು National Health policy 2017 ಪ್ರಕಾರ (2 beds / 1000 population) ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಸ್ವೀಕೃತವಾದ 2027 ಜನಸಂಖ್ಯೆಯನ್ವಯ ಮತ್ತು ಜನಗಣತಿ, ನಾರ್ಮ್ಸ್, ಕ್ರಮಿಸುವ ದೂರ, ವೇಳೆಗಳೊಂದಿಗೆ ಮತ್ತು ಈಗಾಗಲೇ ಹುಟ್ಟುವರಿಯಾಗಿರುವ ಜಿಲ್ಲೆಗಳಲ್ಲಿನ ಆರೋಗ್ಯ ಕೇಂದ್ರಗಳನ್ನು ಹುದ್ದೆಗಳನ್ನು ಸರಿದೂಗಿಸಿಕೊಳ್ಳುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ವಿವಿಧ ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಲು ಅವಶ್ಯಕ ಹುದ್ದೆಗಳೊಂದಿಗೆ ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ.

a. 150 ಹಾಸಿಗೆ ಸಾಮರ್ಥ್ಯದ ಉಪವಿಭಾಗ ಆಸ್ಪತ್ರೆ ಕೊಳ್ಳೇಗಾಲ ಅನ್ನು 250 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದು.
b. ಹನೂರು ತಾಲ್ಲೂಕು ಕೇಂದ್ರಕ್ಕೆ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಮಂಜೂರು ಮಾಡುವುದು.
c. ಈ ಕೆಳಗಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 30 ಹಾಸಿಗೆ ಸಾಮಾರ್ಥ್ಯದ Non MCH ಸಮುದಾಯ

ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವುದು.

1. ಚಾಮರಾಜನಗರ ತಾಲ್ಲೂಕಿನ ಕಾಗಲವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರ.
2. ಹನೂರು ತಾಲ್ಲೂಕಿನ ಮಾರ್ಟಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ.
3. ಹನೂರು ತಾಲ್ಲೂಕು ಪಿ.ಜಿ. ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು
4. ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಪ್ರಾಥಮಿಕ ಆರೋಗ್ಯ ಕೇಂದ್ರ.

d. ಹನೂರು ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಮಲೆಮಹದೇಶ್ವರ ಬೆಟ್ಟ ವ್ಯಾಪ್ತಿಯ ಗೋಪಿನಾಥಂ ಉಪಕೇಂದ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು.

e. ಹನೂರು ತಾಲ್ಲೂಕಿನ ಒಡೆಯರಪಾಳ್ಯ ಸಂಚಾರಿ ಗಿರಿಜನ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು.

ಮೇಲೆ ಓದಲಾದ (2) ರ ಆರ್ಥಿಕ ಇಲಾಖೆಯ ದಿನಾಂಕ: 13.3.2025 ರ ಅಭಿಪ್ರಾಯದಲ್ಲಿ, ಪಿ.ಜಿ. ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮತ್ತು ಗೋಪಿನಾಥಂ ಉಪಕೇಂದ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಮಾತ್ರ ಸಹಮತಿಸಿರುತ್ತದೆ. ಆದರೆ, ಉಳಿದ ಆರೋಗ್ಯ ಸಂಸ್ಥೆಗಳ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಈ ಕೆಳಗೆ ವಿವರಿಸಿರುವ ಕಾರಣಗಳ ಮೇರೆಗೆ ಸದರಿ ಆರೋಗ್ಯ ಸಂಸ್ಥೆಗಳ ಪ್ರಸ್ತಾವನೆಯನ್ನು ಪರಿಷ್ಕರಿಸಿ ಇವುಗಳಿಗೆ ಅನುಮೋದನೆ ನೀಡುವಂತೆ ಆರ್ಥಿಕ ಇಲಾಖೆಗೆ ಮರು ಪ್ರಸ್ತಾಪಿಸಲಾಯಿತು.

- **150 ಹಾಸಿಗೆಗಳ ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಯನ್ನು 250 ಹಾಸಿಗೆಗಳ ಜಿಲ್ಲಾ ಮಟ್ಟದ ಆಸ್ಪತ್ರೆಗೆ ಮೇಲ್ದರ್ಜೆಗೇರಿಸುವ ಕುರಿತು:** - ಚಾಮರಾಜನಗರ ಜಿಲ್ಲಾ ಆಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಿರುವುದರಿಂದ, ಜಿಲ್ಲಾ ಕೇಂದ್ರ ಕಚೇರಿ ಇಲ್ಲದಿರುವ ತಾಲ್ಲೂಕು ಕೇಂದ್ರದಲ್ಲಿ ಜಿಲ್ಲಾ ಮಟ್ಟದ ಆಸ್ಪತ್ರೆಯನ್ನು ಸ್ಥಾಪಿಸುವುದು ಯೋಜನಾ ನೀತಿ ಪ್ರಕಾರವಾಗಿದೆ. ಈಗಾಗಲೇ, KKRDB/KMERC ನಿಧಿಯಿಂದ ಬೀದರ್, ರಾಯಚೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆ. ಇದರನ್ವಯ, ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಯನ್ನು 250 ಹಾಸಿಗೆಗಳ ಜಿಲ್ಲಾ ಮಟ್ಟದ ಆಸ್ಪತ್ರೆಗೆ ಮೇಲ್ದರ್ಜೆಗೇರಿಸಲು ಪರಿಗಣಿಸುವಂತೆ ಮತ್ತೊಮ್ಮೆ ಪ್ರಸ್ತಾಪಿಸಲಾಗಿದೆ.
- **ಹನೂರು ತಾಲ್ಲೂಕು ಕೇಂದ್ರಕ್ಕೆ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಮಂಜೂರು:** - 2025-26 ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ: 138 (ii) ರಲ್ಲಿ ಹನೂರು ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಘೋಷಿಸಲಾಗಿರುವುದರಿಂದ, ಹನೂರು ತಾಲ್ಲೂಕಿನಲ್ಲಿ 100 ಹಾಸಿಗೆ ತಾಲ್ಲೂಕು ಆಸ್ಪತ್ರೆ ನಿರ್ಮಿಸುವ ಪ್ರಸ್ತಾವನೆಯನ್ನು ಕೈಬಿಟ್ಟು, ಆಯವ್ಯಯ ಘೋಷಣೆಯನ್ವಯ ಹನೂರು ತಾಲ್ಲೂಕಿನಲ್ಲಿ ಹಾಲಿಯಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 50 ಹಾಸಿಗೆ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಪರಿಗಣಿಸುವಂತೆ ಮತ್ತೊಮ್ಮೆ ಪ್ರಸ್ತಾಪಿಸಲಾಗಿದೆ.
- **ಒಡೆಯರಪಾಳ್ಯ ಸಂಚಾರಿ ಗಿರಿಜನ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು:** - ಸದರಿ ಹನೂರು ತಾಲ್ಲೂಕಿನ ಒಡೆಯರಪಾಳ್ಯ ಗ್ರಾಮದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಬಾಡಿಗೆ ಪಡೆಯುವುದರೊಂದಿಗೆ ಸ್ಥಾಪಿಸಿದಲ್ಲಿ, ಅಸ್ತಿತ್ವದಲ್ಲಿರುವ ಸಂಚಾರಿ ವೈದ್ಯಕೀಯ ಘಟಕ (MMU) ಅನ್ನು ನಂತರದಲ್ಲಿ ಸ್ಥಗಿತಗೊಳಿಸಬಹುದು. ಅಂತೆಯೇ, ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಹೆಚ್ಚುವರಿ ಯಾವುದೇ ಆವರ್ತಕ ವೆಚ್ಚ ಉಂಟಾಗದಿರುವುದರಿಂದ, ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವಂತೆ ಮತ್ತೊಮ್ಮೆ ಪ್ರಸ್ತಾಪಿಸಲಾಗಿದೆ.
- **ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವ ಬಗ್ಗೆ:** -



No. HFW/66/SMM/2026-HEALTH - HEALTH AND FAMILY WELFARE SEC (Computer No. 2102412)
Generated from eOffice by NAGARAJ R, HFW-JS2(NAG), JOINT SECRETARY 2, HEALTH AND FAMILY WELFARE SEC on 21/03/2026 04:25 PM

ಈ ಕೆಳಕಂಡ ಕಾರಣಗಳಿಂದ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಕೈಬಿಟ್ಟು, ಇವುಗಳು ಹೆಚ್ಚಿನ OPD ಹೊರೆಯನ್ನು ಹೊಂದಿರುವುದರಿಂದ IPHS ಮಾನದಂಡಗಳಡಿ ಅನುಮತಿಸಲಾದ ಹೆಚ್ಚುವರಿಯಾಗಿ ವೈದ್ಯಾಧಿಕಾರಿ (Medical Officer) ಅನ್ನು ಒದಗಿಸುವ ಮೂಲಕ ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸಬಹುದು ಎಂದು ಪ್ರಸ್ತಾಪಿಸಲಾಗಿದೆ: -

I. ಚಾಮರಾಜನಗರ ತಾಲ್ಲೂಕಿನ ಕಾಗಲವಾಡಿ 24x7 ಪ್ರಾಥಮಿಕ ಆರೋಗ್ಯ ಕೇಂದ್ರವು ಹಗಲಿನಲ್ಲಿ ಸರಾಸರಿ 150-160 ಮತ್ತು ರಾತ್ರಿಯಲ್ಲಿ 80-90 ಹೊರರೋಗಿಗಳನ್ನು ಹೊಂದಿದೆ. ಇದಲ್ಲದೆ, ಈ ಪ್ರಾಥಮಿಕ ಆರೋಗ್ಯ ಕೇಂದ್ರವು ಕೆ.ಗುಡಿ ಯಿಂದ ಬಿಳಿಗಿರಿರಂಗನ ಬೆಟ್ಟದವರೆಗಿನ ಎಲ್ಲಾ ಬುಡಕಟ್ಟು ಜನಾಂಗದವರಿಗೆ ಆರೋಗ್ಯ ಸೇವೆ ಒದಗಿಸುತ್ತಿದ್ದು ಮತ್ತು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಿಂದ 16 ಕಿ.ಮೀ ಮತ್ತು ಸಂತೇಮರಹಳ್ಳಿ ಸಮುದಾಯ ಆರೋಗ್ಯ ಕೇಂದ್ರದಿಂದ 18 ಕಿ.ಮೀ ಅಂತರದಲ್ಲಿರುವುದರಿಂದ, ಹೆಚ್ಚುವರಿಯಾಗಿ ವೈದ್ಯಾಧಿಕಾರಿಯನ್ನು ಒದಗಿಸಬಹುದಾಗಿದೆ

II. ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ 24x7 ಪ್ರಾಥಮಿಕ ಆರೋಗ್ಯ ಕೇಂದ್ರವು ಹಗಲಿನಲ್ಲಿ ಸರಾಸರಿ 210-220 ಮತ್ತು ರಾತ್ರಿಯಲ್ಲಿ 50-60 ಹೊರರೋಗಿಗಳನ್ನು ಹೊಂದಿದೆ. ಇದಲ್ಲದೆ, ಈ ಪ್ರಾಥಮಿಕ ಆರೋಗ್ಯ ಕೇಂದ್ರವು ಬಂಡೀಪುರ ಅರಣ್ಯ ಪ್ರದೇಶಗಳ ಬುಡಕಟ್ಟು ಜನಾಂಗದವರಿಗೆ ಸೇವೆ ಒದಗಿಸುತ್ತಿದ್ದು ಮತ್ತು ಇದು ಅಪಘಾತ ವಲಯವಾದ ಊಟಿ ಹೆದ್ದಾರಿಯಲ್ಲಿದ್ದು, ಹೆಚ್ಚಿನ ಪ್ರವಾಸಿಗರು ಇಲ್ಲಿಗೆ ಬರುವುದರಿಂದ ಹಾಗೂ ಗುಂಡ್ಲುಪೇಟೆ ಪ್ರಾಥಮಿಕ ಆರೋಗ್ಯ ಕೇಂದ್ರವು ಸಾಕಷ್ಟು ಅಂತರದಲ್ಲಿರುವುದರಿಂದ, ಹೆಚ್ಚುವರಿಯಾಗಿ ವೈದ್ಯಾಧಿಕಾರಿಯನ್ನು ಒದಗಿಸಬಹುದಾಗಿದೆ.

III. ಹನೂರು ತಾಲ್ಲೂಕಿನ ಮಾರ್ಟಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರವು ಹಗಲಿನಲ್ಲಿ ಸರಾಸರಿ 110-120 ಮತ್ತು ರಾತ್ರಿಯಲ್ಲಿ 30-40 ಹೊರರೋಗಿಗಳನ್ನು ಹೊಂದಿದೆ, ಜೊತೆಗೆ ತಿಂಗಳಿಗೆ 9-10 ಹೆರಿಗೆಗಳು ಸಂಭವಿಸುತ್ತಿವೆ ಇದಲ್ಲದೆ, ಈ ಪ್ರಾಥಮಿಕ ಆರೋಗ್ಯ ಕೇಂದ್ರವು ಬಹಳ ದೂರದಲ್ಲಿದ್ದು, ಇತರ ಆರೋಗ್ಯ ಕೇಂದ್ರಗಳನ್ನು ತಲುಪಲು ಕಡಿಮೆ ಸಾರಿಗೆ ಸೌಲಭ್ಯಗಳಿದ್ದು, ಚಾಮರಾಜನಗರ ಜಿಲ್ಲಾ ಆರೋಗ್ಯ ಕೇಂದ್ರವನ್ನು ತಲುಪಲು ಸುಮಾರು 5 ಗಂಟೆಗಳು ಬೇಕಾಗುವುದರಿಂದ ಹಾಗೂ ಹತ್ತಿರದ ರಾಂಪುರ ಸಮುದಾಯ ಆರೋಗ್ಯ ಕೇಂದ್ರ 16 ಕಿ.ಮೀ ಅಂತರದಲ್ಲಿರುವುದರಿಂದ, ಇಲ್ಲಿನ ಬುಡಕಟ್ಟು ಜನಾಂಗದವರಿಗೆ ಚಿಕಿತ್ಸೆ ಸೇವೆ ಒದಗಿಸಲು ಹೆಚ್ಚುವರಿಯಾಗಿ ವೈದ್ಯಾಧಿಕಾರಿಯನ್ನು ಒದಗಿಸಬಹುದಾಗಿದೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮರು ಪ್ರಸ್ತಾವನೆ ಸಂಬಂಧವಾಗಿ ಆರ್ಥಿಕ ಇಲಾಖೆಯ ದಿನಾಂಕ:21.4.2025 ರ ಅಭಿಪ್ರಾಯದಲ್ಲಿ, ಜಿಲ್ಲಾಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಿದ ನಂತರ ಅಲ್ಲಿ ಜಿಲ್ಲಾಸ್ಪತ್ರೆಯನ್ನು ಮಾಡಬೇಕೆಂಬ ಬಗ್ಗೆ policy ಇಲ್ಲದಿರುವುದರಿಂದ ಹಾಗೂ ಇದು ಹೆಚ್ಚಿನ ಆರ್ಥಿಕ ಪರಿಣಾಮಗಳನ್ನು ಹೊಂದುವುದರಿಂದ ಕೊಳ್ಳೇಗಾಲದಲ್ಲಿರುವ ತಾಲ್ಲೂಕು ಆಸ್ಪತ್ರೆಯನ್ನು ಜಿಲ್ಲಾಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಿಲ್ಲ. ಈಗಾಗಲೇ 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 138(ii) ರಲ್ಲಿ 50 ಹಾಸಿಗೆ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಸಹಮತಿಸಿದ್ದು, ಅದರಲ್ಲಿ ಹನೂರು ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ತಿಳಿಸಲಾಗಿದೆ. ಒಡೆಯರ ಪಾಳ್ಯಕ್ಕೆ 8 ಕಿ.ಮೀ ಅಂತರದಲ್ಲಿ ಪಿ.ಜಿ. ಪಾಳ್ಯ ಪ್ರಾಥಮಿಕ ಕೇಂದ್ರದ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಸಹಮತಿಸಲಾಗಿರುವುದರಿಂದ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಮಾನವ ಸಂಪನ್ಮೂಲಕ್ಕೂ & MMU ರಲ್ಲಿನ ಮಾನವ ಸಂಪನ್ಮೂಲಕ್ಕೂ ಹೋಲಿಕೆ ಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ, ಒಡೆಯರಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದ ಬದಲಾಗಿ MMU ಮುಂದುವರೆಸುವಂತೆ ಮತ್ತು ಕಾಗಲವಾಡಿ, ಮಾರ್ಟಳ್ಳಿ ಹಾಗೂ ಹಂಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ OPD ಹೊರೆಯನ್ನು ತಗ್ಗಿಸಲು ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೆಚ್ಚುವರಿಯಾಗಿ ಒಂದು ವೈದ್ಯಾಧಿಕಾರಿ (Medical Officer) ಹುದ್ದೆಯಂತೆ ಒಟ್ಟು 03

ಹುದ್ದೆಗಳನ್ನು 1 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಪಡೆಯಲು ತಿಳಿಸಿ ಸಹಮತಿಸಿರುತ್ತದೆ.

ವೈದ್ಯಕೀಯ ಮಹಾವಿದ್ಯಾಲಯಗಳನ್ನು ಸ್ಥಾಪಿಸುವ ಸಲುವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲಾಗಿರುವ ಜಿಲ್ಲಾ ಕೇಂದ್ರಗಳಲ್ಲಿ ಸ್ವತಂತ್ರ ಜಿಲ್ಲಾ ಆಸ್ಪತ್ರೆಗಳನ್ನು ಸ್ಥಾಪಿಸುವ ಅಗತ್ಯತೆಯಿರುತ್ತದೆ. ಜಿಲ್ಲಾ ಆಸ್ಪತ್ರೆಗಳು ರೋಗಿಗಳಿಗೆ ದ್ವಿತೀಯ ಹಂತದ ಆರೋಗ್ಯ ಸೇವೆಗಳನ್ನು ಒದಗಿಸುತ್ತವೆ. ಆದರೆ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ತೃತೀಯ ಹಂತದ ಆರೋಗ್ಯ ಸೇವೆಗಳನ್ನು ನೀಡುತ್ತಿವೆ. ರೋಗಿಗಳು ದ್ವಿತೀಯ ಹಂತದ ಆರೋಗ್ಯ ಸೇವೆಗಳಿಗಾಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಗೆ ಹೆಚ್ಚು ಆಗಮಿಸುತ್ತಾರೆ. ಇದು ಸಾಮಾನ್ಯವಾಗಿ ಚಿಕಿತ್ಸೆಯ ಅಗತ್ಯತೆಯ 70 ರಷ್ಟು ಒಳಗೊಳ್ಳುತ್ತದೆ ಇದು ಹೆಚ್ಚಿನ ಮಟ್ಟದ ತೃತೀಯ ಆರೋಗ್ಯ ಸೇವೆಗಳಿಗೆ ಗಮನ ಕಡಿಮೆಯಾಗಲು ಕಾರಣವಾಗುತ್ತದೆ. ಅಂತಹ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ನಿಯೋಜಿಸಲಾಗಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವೈದ್ಯಾಧಿಕಾರಿಗಳು ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಗೆ ಸಂಬಂಧಿಸಿದ NMC ಮಾನದಂಡಗಳನ್ನು ಪೂರೈಸುತ್ತಿಲ್ಲ ಎಂದು ವರದಿಯಾಗಿದೆ. ಅದರಂತೆ, ಚಿಕಿತ್ಸೆಗಾಗಿ ಮತ್ತು ರಾಷ್ಟ್ರೀಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಜಿಲ್ಲಾ ಆಸ್ಪತ್ರೆ ಮಟ್ಟದವರೆಗಿನ ಸೇವೆಗಳ ಸರಣಿಯಲ್ಲಿ ನಿರಂತರತೆಯನ್ನು ಒದಗಿಸುವ ಅಗತ್ಯತೆಯನ್ನು ಅರಿತುಕೊಂಡು, ಅಸ್ತಿತ್ವದಲ್ಲಿರುವ ಜಿಲ್ಲೆಗಳಲ್ಲಿ ಪ್ರತ್ಯೇಕ ಜಿಲ್ಲಾ ಆಸ್ಪತ್ರೆಗಳನ್ನು ಸ್ಥಾಪಿಸಲು NHM ರಡಿ ಅನುದಾನ ಕಲ್ಪಿಸಲಾಗುತ್ತಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಪರಿಣಾಮಕಾರಿ ಸೇವೆಗಳನ್ನು ಒದಗಿಸುವ ಅನುಭವವು ಧನಾತ್ಮಕವಾಗಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ವಿವಿಧ ಆರೋಗ್ಯ ಸಂಸ್ಥೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಯಿತು.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಗಳ ವಿವರಗಳು | ಹೆಚ್ಚುವರಿ ಮಂಜೂರು ಮಾಡಬೇಕಾದ ಹುದ್ದೆಗಳ ಸಂಖ್ಯೆ | ಆವರ್ತಕ ವೆಚ್ಚ (ಅಂದಾಜು) | ಅನಾವರ್ತಕ ವೆಚ್ಚ (ಅಂದಾಜು) |
|---|---|---|---|---|
| 1 | 150 ಹಾಸಿಗೆಗಳ ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಯನ್ನು 250 ಹಾಸಿಗೆಗಳ ಜಿಲ್ಲಾ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವುದು. | 98 | 629.92 | 4800.00 |
| 2 | ಪಿ.ಜಿ. ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವುದು (ಆರ್ಥಿಕ ಇಲಾಖೆಯು ಸಹಮತಿಸಿದೆ) | 25 | 249.25 | 930.00 |
| 3 | ಗೋಪಿನಾಥಂ ಉಪಕೇಂದ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು. (ಆರ್ಥಿಕ ಇಲಾಖೆಯು ಸಹಮತಿಸಿದೆ) | 08 | 74.45 | 300.00 |
| 4 | ಹನೂರು ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 50 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದು. (ಆರ್ಥಿಕ ಇಲಾಖೆಯು ಸಹಮತಿಸಿದೆ) | 39 | 380.34 | 2058.00 (ಕಟ್ಟಡ + ವಸತಿ ಗೃಹ + ಉಪಕರಣ + ಪೀಠೋಪಕರಣ) |
| 5 | ಹನೂರು ತಾಲ್ಲೂಕು ಒಡೆಯರಪಾಳ್ಯ ಸಂಚಾರಿ ಗಿರಿಜನ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ | 4 | 35.80 | 425.80 (ಕಟ್ಟಡ + ವಸತಿ ಗೃಹ+ |



No. HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)
Generated from eOffice by NAGARAJ R, HFW-JS2(NAG), JOINT SECRETARY 2, HEALTH AND FAMILY ...

| | | | | |
|---|---|---|---|---|
| | ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು | | | ಉಪಕರಣ, ಪೀಠೋಪಕರಣ) |
| | ಒಟ್ಟಾರೆ | 174 | 1369.76 | 8513.80 |

ಮೇಲೆ ಓದಲಾದ (3) ರಲ್ಲಿ, ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆ, ಗೋಪಿನಾಥಂ ಆರೋಗ್ಯ ಉಪಕೇಂದ್ರ, ಪಿ.ಜಿ. ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ, ಹನೂರು ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ, ಒಡೆಯರಪಾಳ್ಯ ಸಂಚಾರಿ ಗಿರಿಜನ ಆರೋಗ್ಯ ಘಟಕ ಆರೋಗ್ಯ ಕೇಂದ್ರಗಳನ್ನು ಅವಶ್ಯಕ ಹುದ್ದೆಗಳೊಂದಿಗೆ ಮೇಲ್ದರ್ಜೆಗೇರಿಸುವುದರೊಂದಿಗೆ ಪ್ರಸ್ತಾಪಿತ ಆಸ್ಪತ್ರೆಗಳಿಗೆ ತಗಲುವ ಅಂದಾಜು ಆವರ್ತಕ ವೆಚ್ಚ ರೂ.1369.76 ಹಾಗೂ ಅನಾವರ್ತಕ ವೆಚ್ಚ ರೂ.8513.80 ಲಕ್ಷಗಳನ್ನು ಭರಿಸಲು ಮತ್ತು ಪ್ರಸ್ತುತ ಸದರಿ ಆಸ್ಪತ್ರೆಗಳು ಹೊಂದಿರುವ ಮೂಲಭೂತ ಸೌಕರ್ಯಗಳಿಗೆಗನುಗುಣವಾಗಿ ಅವಶ್ಯಕ ಹುದ್ದೆಗಳನ್ನು ಮಂಜೂರು ಮಾಡಲು ಹಾಗೂ ಆಸ್ಪತ್ರೆಗಳ ಕಟ್ಟಡ ಕಾಮಗಾರಿಗಳ ವಿವರವಾದ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ

ಆದರಂತೆ, ಈ ಕೆಳಕಂಡಂತೆ ಆದೇಶ: -

<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 03 ಸಿಜಿಇ 2025 ಬೆಂಗಳೂರು, ದಿನಾಂಕ: 03.5.2025.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಈ ಕೆಳಕಂಡ ವಿವಿಧ ಆರೋಗ್ಯ ಸಂಸ್ಥೆಗಳನ್ನು ಅಗತ್ಯ ಹುದ್ದೆಗಳ ಸಮೇತ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಕಾಮಗಾರಿಗಳ ವಿವರಗಳು | ಹೆಚ್ಚುವರಿ ಮಂಜೂರು ಮಾಡಬೇಕಾದ ಹುದ್ದೆಗಳ ಸಂಖ್ಯೆ | ಆವರ್ತಕ ವೆಚ್ಚ (ಅಂದಾಜು) | ಅನಾವರ್ತಕ ವೆಚ್ಚ (ಅಂದಾಜು) |
|---|---|---|---|---|
| 1 | 150 ಹಾಸಿಗೆಗಳ ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಯನ್ನು 250 ಹಾಸಿಗೆಗಳ ಜಿಲ್ಲಾ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವುದು. | 98 | 629.92 | 4800.00 |
| 2 | ಪಿ.ಜಿ. ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವುದು (ಆರ್ಥಿಕ ಇಲಾಖೆಯು ಸಹಮತಿಸಿದೆ) | 25 | 249.25 | 930.00 |
| 3 | ಗೋಪಿನಾಥಂ ಉಪಕೇಂದ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು. (ಆರ್ಥಿಕ ಇಲಾಖೆಯು ಸಹಮತಿಸಿದೆ) | 08 | 74.45 | 300.00 |
| | | | | 2058.00 |

| | | | | |
|---|---|---|---|---|
| 4 | ಹನೂರು ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 50 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದು.<br>(ಆರ್ಥಿಕ ಇಲಾಖೆಯು ಸಹಮತಿಸಿದೆ) | 39 | 380.34 | (ಕಟ್ಟಡ +ವಸತಿ ಗೃಹ + ಉಪಕರಣ + ಪೀಠೋಪಕರಣ) |
| 5 | ಹನೂರು ತಾಲ್ಲೂಕು ಒಡೆಯರಪಾಳ್ಯ ಸಂಚಾರಿ ಗಿರಿಜನ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು | 4 | 35.80 | 425.80 (ಕಟ್ಟಡ + ವಸತಿ ಗೃಹ+ ಉಪಕರಣ, ಪೀಠೋಪಕರಣ) |
| | **ಒಟ್ಟು** | **174** | **1369.76** | **8513.80** |

ಷರತ್ತುಗಳು:-

1. ಈ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಯನ್ನು ಪಡೆಯತಕ್ಕದ್ದು.
2. ಈ ಕಾಮಗಾರಿಗಳನ್ನು ಕೆಟಿಪಿಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸತಕ್ಕದ್ದು
3. ಸದರಿ ಆರೋಗ್ಯ ಸಂಸ್ಥೆಗಳಿಗೆ ಅವಶ್ಯವಿರುವ ಹುದ್ದೆಗಳ ಸೃಜಿಸುವ ಸಂಬಂಧ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸತಕ್ಕದ್ದು.
4. ಸದರಿ ಆರೋಗ್ಯ ಸಂಸ್ಥೆಗಳ ಕಟ್ಟಡ ಕಾಮಗಾರಿಗಳ ರೂ.8513.80 ಲಕ್ಷಗಳ ವಿವರವಾದ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಮುಂದುವರೆದು, ಕಾಗಲವಾಡಿ, ಮಾರ್ಟಳ್ಳಿ ಹಾಗೂ ಹಂಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆಚ್ಚುವರಿಯಾಗಿ ಒಂದು ವೈದ್ಯಾಧಿಕಾರಿ (Medical Officer) ಯನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಹಾಗೂ ಸದರಿ ಕೇಂದ್ರಗಳ ಕಾರ್ಯಕ್ಷಮತೆ (Performance) ಆಧಾರದ ಮೇಲೆ ಹುದ್ದೆಗಳನ್ನು ಮುಂದುವರೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಇದಕ್ಕಾಗಿ ತಗಲುವ ಆವರ್ತಕ ವೆಚ್ಚವನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಯಡಿ ಭರಿಸಲು ಸೂಚಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 68 ವೆಚ್ಚ-5/2025, ದಿನಾಂಕ: 13.3.2025 ಹಾಗೂ ದಿನಾಂಕ: 21.4.2025 ರ ಅಭಿಪ್ರಾಯ ಮತ್ತು ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ.266/2025 ದಿನಾಂಕ: 24.4.2025 ರ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮ. ವಿ) 8/5/2025
ಸರ್ಕಾರದ ಅಧೀನ ಕಾರ್ಯದರ್ಶಿ,



e No. HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)
nerated from eOffice by NAGARAJ R, HFW-JS2(NAG), JOINT SECRETARY 2, HEALTH AND FAMILY WELFARE SEC

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಆರೋಗ್ಯ- 1 &2)

ಇವರಿಗೆ : -

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) / ಮಹಾಲೇಖಪಾಲರು (ಲೆಕ್ಕ ಮತ್ತು ಪರಿಶೋಧನೆ), ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
4. ಮುಖ್ಯ ಇಂಜಿನೀಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನೀಯರಿಂಗ್ ಘಟಕ, ಆರೋಗ್ಯ ಸೌಧ, ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
6. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಕೆ.ಪಿ.ಸಿ.ಎಲ್ ಕಚೇರಿ, ಅರಮನೆ ರಸ್ತೆ, ಬೆಂಗಳೂರು
7. ಮುಖ್ಯ ಲೆಕ್ಕ ಪತ್ರಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ (ವಿಷಯ ಸಂ: ಸಿ:266/2025, ದಿನಾಂಕ: 24.4.2025).
9. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4&5), ವಿಧಾನ ಸೌಧ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿ-2 ರವರ ಆಪ್ತ ಶಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.



File No HFW/66/SMM/2026-HEALTH 1-HEALTH AND FAMILY WELFARE SEC (Computer No. 2102412)

# ಅನುಬಂಧ- 4

**Details of Taluk wise Rural PHC Requirement based on 2027 Population**

**(Considering Taluks in Malanad area - norms 1 PHC per 20,000 population) including KKRDB order**

| Sl no | District | Total Rural population 2027(estimated as per declining growth method) | No of PHC's required as per 2027 population | Existing PHCs | remarks |
|---|---|---|---|---|---|
| 1 | Bagalkote | 1281482 | 43 | 47 | |
| 2 | Belagavi | 3768596 | 115 | 133 | |
| 3 | Ballari | 733669 | 24 | 34 | |
| 4 | Bangalore urban | 272192 | 9 | 36 | |
| 5 | Bengaluru (Rural) | 887427 | 30 | 47 | |
| 6 | Bidar | 1275367 | 43 | 49 | |
| 7 | Chamarajanagara | 804519 | 39 | 55 | |
| 8 | Chikballapur | 942365 | 31 | 55 | |
| 9 | Chikkamagaluru | 767233 | 38 | 88 | |
| 10 | Chitradurga | 1310119 | 44 | 77 | |
| 11 | Dakshina Kannada | 873451 | 44 | 62 | |
| 12 | Davangere | 996211 | 41 | 79 | |
| 13 | Dharwad | 824849 | 34 | 33 | |
| 14 | Gadag | 708297 | 24 | 36 | |
| 15 | Gulbarga | 1926327 | 64 | 80 | |
| 16 | Hasan | 1232973 | 52 | 134 | |
| 17 | Haveri | 1152261 | 51 | 69 | |
| 18 | Kodagu | 452578 | 23 | 29 | |
| 19 | Kolara | 1073832 | 36 | 60 | |
| 20 | Koppal | 1214748 | 40 | 50 | |
| 21 | Mandya | 1348595 | 45 | 113 | |
| 22 | Mysore | 1660736 | 66 | 117 | |
| 23 | Raichur | 1548917 | 52 | 51 | |
| 24 | Ramanagar | 745700 | 25 | 61 | |
| 25 | Shivamogga | 1113712 | 56 | 91 | |
| 26 | Tumkur | 1876361 | 63 | 142 | |
| 27 | Udupi | 726298 | 36 | 62 | |
| | | | | | |
| Sl no | District | Total Rural | No of PHC's | Existing | |

| | | population 2027(estimated as per declining growth method) | required as per 2027 population | PHCs | |
|---|---|---|---|---|---|
| 28 | Uttar Kannada | 980357 | 49 | 78 | |
| 29 | Vijayanagara | 1079744 | 36 | 51 | |
| 30 | Vijayapura | 1957206 | 65 | 60 | |
| 31 | Yadgir | 1125142 | 38 | 39 | |